ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ   NIMMURU SUDDI

ಸಂಪಾದಕರು: ಸುಂದರ್   Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 247 RNI Number : KNKAN/25/A2770 19-09-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :247 ರಾಯಚೂರು 19-09-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಕರವೇ ವತಿಯಿಂದ ಮುಖ್ಯಮಂತ್ರಿ ಡಿಕೆಶಿ ಅಭಿನಂದನಾ ಸಮಾರಂಭ - ವಿನೋದರೆಡ್ಡಿ

ರಾಯಚೂರು,ಸೆ.18-

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ರಾಜ್ಯದ ಮುಖ್ಯ ಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ನಾಳೆ ಸಂಜೆ 5:30 ಬೆಂಗಳೂರಿನ ಕೋಣನಕುಂಟೆ ಪ್ರಸ್ಟೀಜ್ ಸಭಾಂಗಣದಲ್ಲಿ ಅಭಿನಂದನೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷರಾದ ವಿನೋದರೆಡ್ಡಿ ಎಂ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಟಿ ನಾರಾಯಣಗೌಡ ಅವರ ನೇತೃತ್ವದಲ್ಲಿ ಅತ್ಯಂತ ಅದ್ದೂರಿ ಯಾಗಿ ಈ ಸಂಭ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಜಗದ್ಗುರು ಶ್ರೀ ಶ್ರೀಶ್ರೀ ನಿರ್ಮಲಾನಂದಪುರಿ



ಮಹಾಸ್ವಾಮೀಜಿ ಪೀಠಾಧ್ಯಕ್ಷರು ಆದಿ ಚುಂಚನಗಿರಿ ಮಠ, ನಾಗಮಂಗಲ, ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಪೀಠಾಧ್ಯಕ್ಷರು ಶ್ರೀಗುರು ಶಾಂತೇಶ್ವರ ಸಂಸ್ಥಾನ ಮಠ, ಹುಕ್ಕೇರಿ ಬೆಳಗಾವಿ ಹಾಗೂ ಶ್ರೀ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಮಹಾಸ್ವಾಮಿಗಳು, ಪೀಠಾಧ್ಯಕ್ಷರು ಮಾದಾರ ಚನ್ನಯ್ಯ ಗುರುಪೀಠ ಚಿತ್ರದುರ್ಗ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಾಡೋಜ ಡಾ.ಹಂಪ ನಾಗರಾಜಯ್ಯ ಹಿರಿಯ ಸಾಹಿತಿಗಳು, ಬೆಂಗಳೂರು ಅಭಿವೃದ್ಧಿ ಸಚಿವರು

ಕೃಷ್ಣಬೈರೇಗೌಡ', ಜಲಸಂಪನ್ಮೂಲ ಸಚಿವರು,ಎನ್. ಚೆಲುವರಾಯಸ್ವಾಮಿ, ಶಿಕ್ಷಣ ಸಚಿವರು ಎಸ್. ಮಧುಬಂಗಾರಪ್ಪ, ಕರ್ನಾಟಕ ಜಾನಪದ ಪರಿಷತ್ತು ಅಧ್ಯಕ್ಷರು ಡಾ. ಹಿ.ಚಿ. ಬೋರಲಿಂಗಯ್ಯ, ಸಚಿವ ರಾಮಲಿಂಗಾರೆಡ್ಡಿ, ವಸತಿ ಸಚಿವರು ಜಮೀರ್ ಅಹ್ಮದ್ ಖಾನ್, ಅಬಕಾರಿ ಸಚಿವರು ಕೆ.ಎಂ.ಶಿವಲಿಂಗೇಗೌಡ, ಸಚಿವರು ಹೆಚ್.ಸಿ. ಬಾಲಕೃಷ್ಣ, ಸಚಿವರು ರಿಜ್ವಾನ್ ಹರ್ಷದ್ ಸೇರಿದಂತೆ ಅನೇಕರು ಗಣ್ಯರು ಆಗಮಿ ಸಲಿದ್ದಾರೆ.


ಈ ಬೃಹತ್ ಕಾರ್ಯಕ್ರಮದಲ್ಲಿ ಕರ್ನಾಟಕ ಸಾರ್ವಭೌಮ ಪ್ರಶಸ್ತಿ' ಯನ್ನು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಸಾಧನೆ ಮಾಡಿದ 17 ಸಾಧಕರನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಪ್ರಶಸ್ತಿಗೆ ನಟ ದೊಡ್ಡಣ್ಣ

ರಾಯಚೂರು ಜಿಲ್ಲೆಯವರಾದ ಕವಿತಾ ಮಿಶ್ರ ಕೃಷಿ ಸಾಧಕ, ಕಸ್ತೂರಿ ಶಂಕರ್ ಖ್ಯಾತ ಗಾಯಕಿ, ಯು.ಟಿ. ಖಾದರ ಫರೀದ್ ಆರೋಗ್ಯ ಸಚಿವರು, ಡಾ. ಪದ್ಮನಿ ನಾಗರಾಜ ಪ್ರಾಧ್ಯಾಪಕರು ಲೇಖಕಿ ಹಾಗೂ ಸಂಘಟಕಿ, ಬಾಬು ವೈಟ್ ಗೋಲ್ಡ್ ಉದ್ಯಮಿ ಮತ್ತು ಸಮಾಜ ಸೇವಕ, ಶ ಎಸ್.ಪಿ. ದಯಾನಂದ ನಿರ್ದೇಶಕರು ಡಿ.ಎಸ್.ಮ್ಯಾಕ್ಸ್ ಪ್ರಾಪಟಿ ೯ಸ್ ಪ್ರೈ.ಲಿ. 'ಪ್ರೈ.ಲಿ. ಹಾಗೂ ಇನ್ನಿತರ 12 ಜನರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಅಭಿನಂದನಾ ಕಾರ್ಯಕ್ರಮಕ್ಕೆ ಜಿಲ್ಲೆಯ ನೂರಾರು ಕರವೇ ಕಾರ್ಯಕರ್ತರು, ಕನ್ನಡಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಎಂ ಎಸ್ ವೆಂಕಟೇಶ, ದಿವ್ಯಾ ವಿ ಎಂ ರೆಡ್ಡಿ, ಎಸ್ ಲಕ್ಷ್ಮಿ, ಎಂ ಎಸ್ ಮದನಿ, ಬದರ್ ದ್ದೀನ್ ಸೇರಿದಂತೆ ಉಪಸ್ಥಿತರಿದ್ದರು.

ಗೃಹರಕ್ಷಕ ದಳ ಕಚೇರಿಯಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ



ರಾಯಚೂರು ಸೆ.18-

ರಾಯಚೂರು ಜಿಲ್ಲಾ ಗೃಹರಕ್ಷಕ ದಳ ವತಿಯಿಂದ 79ನೇ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಕಚೇರಿಯ ಆವರಣದಲ್ಲಿ ವಿಜೃಂಭಣೆಯಿದ ಆಚರಣೆ ಮಾಡಲಾಯಿತು.

ಜಿಲ್ಲಾ ಗೃಹರಕ್ಷಕದಳದ ಸಮಾದೇಷ್ಟರಾದ ದೀಪಾ ಗೋಡೆಪಾಡ್ ಅವರು ರಾಷ್ಟ ಧ್ವಜಾರೋಹಣವನ್ನು ನೆರವೆರಿಸಿ, ಗೌರವ ವಂದನೆ ಸ್ವೀಕರಿಸಿದರು.

ಈ ವೇಳೆ ಜಿಲ್ಲಾ ಗೃಹರಕ್ಷಕದಳದ ಸಮಾದೇಷ್ಟರಾದ ದೀಪಾ ಗೋಡೆಪಾಡ್ ಅವರು ಮಾತನಾಡಿ ಕಲ್ಯಾಣ-ಕರ್ನಾಟಕ ಪ್ರದೇಶ ನಿಜಾಮರ ಆಳ್ವಿಕೆಯಿಂದ ಸ್ವಾತಂತ್ರ್ಯಗೊಡು 79 ವರ್ಷಗಳಾಗಿವೆ. ಇದಕ್ಕಾಗಿ ಹೋರಾಡಿದ ಎಲ್ಲ ಮಹನೀಯರಿಗೆ ಇಂದು ನಾವು ಸ್ಮರಿಸಬೇಕಿದೆ. ಹೈದರಾಬಾದ್ ನಿಜಾಮು ಮಾತ್ರ ಸ್ವತಂತ್ರವಾಗಿರಲು ಹವಣಿಸಿ, ರಾಜ ಪ್ರಭುತ್ವದ ನಿರಂಕುಶ ಆಡಳಿತವನ್ನು ಜನರ ಮೇಲೆ ಹೇರಲು ನಿರ್ಧರಿಸಿದ. 1947ರ ಜೂನ್ 26ರಂದು ಭಾರತ ಒಕ್ಕೂಟ ವ್ಯವಸ್ಥೆಗೆ ಸೇರುವುದಿಲ್ಲ, ಸ್ವತಂತ್ರವಾಗಿರುತ್ತೇನೆ ಎಂದು ರಾಮನನ್ನು ಹೊರಡಿಸಿದನು. ಈ ಸಂದರ್ಭದಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಸ್ವಾತಂತ್ರ್ಯದ ಕಹಳೆ ಬುಗಿಲೆದ್ದಿತು ಎಂದು ಇತಿಹಾಸವನ್ನು ಸ್ಮರಿಸಿಕೊಂಡರು.

ಗೃಹರಕ್ಷಕರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆರ್ಥಿಕ ನೆರವು ಕಲ್ಪಿಸುವ ದೃಷ್ಟಿಯಿಂದ

3ನೇ ಪುಟ.....

ಬಡವರ, ರೈತರ, ಯುವಕರ, ಮಹಿಳೆಯರ ವಿರೋಧಿ ಸರ್ಕಾರ ರಾಜ್ಯದಲ್ಲಿದೆ: ಬಿ.ವೈ.ವಿಜಯೇಂದ್ರ

ಶಿವಮೊಗ್ಗ: ಜನರ, ಬಡವರ, ರೈತರ, ಯುವಕರ, ಮಹಿಳೆಯರ ವಿರೋಧಿ ಸರ್ಕಾರ ರಾಜ್ಯದಲ್ಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಜ್ಯ ಸರ್ಕಾರದ ವಿರುದ್ದ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಶಿಕಾರಿಪುರ ತಾಲೂಕು ಬಿಜೆಪಿ ವತಿಯಿಂದ ಸರ್ಮಪಕ ವಿದ್ಯುತ್ ಪೂರೈಕೆ ಮಾಡಬೇಕೆಂದು ಆಗ್ರಹಿಸಿ ಬಿಜೆಪಿ ಕಚೇರಿಯಿಂದ ಪಾದಯಾತ್ರೆ ಪ್ರಾರಂಭಿಸಿ, ಪಟ್ಟಣದ ಪ್ರಮುಖ ರಸ್ತೆಯಲ್ಲಿ ಪಾದಯಾತ್ರೆ ನಡೆಸಿ, ತಾಲೂಕು ಕಚೇರಿ ಮುಂಭಾಗ ನಡೆದ ಸಾಮಾವೇಶದಲ್ಲಿ ಮಾತನಾಡಿದರು.

ನಮ್ಮ ತಾಲೂಕಿಗೆ ಹೋರಾಟದ ಹಿನ್ನಲೆ ಇಲ್ಲದ ಉಸ್ತುವಾರಿ ಸಚಿವ ಹಾರಾಟದ ಮೂಲಕ ತನ್ನ ಬೇಳೆ ಬೇಯಿಸಿಕೊಳ್ಳಲು ನಮ್ಮ ತಾಲೂಕಿಗೆ ಬರುತ್ತಿದ್ದಾರೆ. ಮಧು ಬಂಗಾರಪ್ಪನವರೇ ನಮಗೂ ನಿಮಗೆ ನಿಮ್ಮಂಥೆ ಭಾಷೆಯಲ್ಲಿ ಉತ್ತರ ಕೊಡಲು ಬರುತ್ತದೆ. ಆದರೆ ನಮ್ಮ ತಂದೆ ತಾಯಿ ಇದನ್ನೆಲ್ಲಾ ನಮಗೆ ಹೇಳಿ ಕೊಟ್ಟಿಲ್ಲ. ನೀವು ಶಿಕಾರಿಪುರದ ಬಗ್ಗೆ ಮಾತನಾಡಬೇಕು ಎಂದರೆ ಎಚ್ಚರಿಕೆಯಿಂದ ಇರಬೇಕು. ರಾಜ್ಯಕ್ಕೆ ರೈತ ನಾಯಕನನ್ನು ಕೊಟ್ಟ ಕೀರ್ತಿ ಶಿಕಾರಿಪುರದ ಮತದಾತರಿಗೆ ತಲುಪುತ್ತದೆ. ಮುಂದೆ ಗೌರಯುತವಾಗಿ ಬಂದು ಗೌರವಯುತ ಹೋಗಬೇಕು. ಇಲ್ಲವಾದರೆ ಹೋರಾಟದ ಕಿಚ್ಚು ಎಲ್ಲಿಗೆ ಬೇಕಾದರೂ ಹೋಗಬಹುದು ಎಂದರು.

ಸಿಎಂ ಆದ ಮೇಲೆ ಡಿ.ಕೆ.ಶಿವಕುಮಾರ್ ಮೊದಲ ಬಾರಿಗೆ ಶಿವಮೊಗ್ಗಕ್ಕೆ



ಆಗಮಿಸುತ್ತಿದ್ದಾರೆ. ಮಧು ಬಂಗಾರಪ್ಪನವರೇ ಕಳೆದ ಚುನಾವಣೆಯ ಪ್ರಣಾಳಿಕೆಯಲ್ಲಿ ಇರುವ ಒಂದಾದರೂ ಬೇಡಿಕೆ ಈಡೇರಿಸಿದ್ದಾರೆಯೇ ಎಂದು ಸಿಎಂಗೆ ಕೇಳಿ ಎಂದು ಸಚಿವ ಮಧು ಬಂಗಾರಪ್ಪನವರ ವಿರುದ್ದ ಗುಡುಗಿದರು.

ಕೆರೆ ತುಂಬಿಸಲು ವಿದ್ಯುತ್ ನೀಡಲು ರಾಜ್ಯ ಸರ್ಕಾರಕ್ಕೆ ಆಗುತ್ತಿಲ್ಲ. ಕಸ್ತೂರಿ ರಂಗನ್ ವರದಿ ಬಗ್ಗೆ ಸಚಿವರು ಪಾದಯಾತ್ರೆ ಮಾಡಿದರು. ಶಿಕ್ಷಣ ಸಚಿವರಾಗಿ ಅಧ್ಯಯನ ಮಾಡಿ ಪಾದಯಾತ್ರೆ ಮಾಡಬೇಕಾಗುತ್ತದೆ. ನಿಮ್ಮದೇ ಯುಪಿಎ ಸರ್ಕಾರದಲ್ಲಿ ಬಂದ ವರದಿಯಿಂದ ಕಾಡಂಚಿನ ಜನ ಭೀತಿಗೆ ಒಳಗಾಗಿದ್ದಾರೆ. ಕಾಂಗ್ರೆಸ್ ಸರ್ಕಾರ ರೈತರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಬಡವರನ್ನು ಮರೆತು ಬಿಟ್ಟಿದ್ದಾರೆ ಎಂದು ದೂರಿದರು.

ಬಳ್ಳಾರಿ ಚಲೋ ಪಾದಯಾತ್ರೆಗೆ ನಮ್ಮ ನಾಯಕರು ಬಂದು ಬಿಸಿಲು ನೋಡಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದರು. ಆದರೆ ನಾನು ಪಾದಯಾತ್ರೆ ಮಾಡಿದ್ದೇನೆ. ದಾರಿ ಉದ್ದಕ್ಕೂ, ಹಾಲುಮತ, ಅಲೆಮಾರಿ, ಬಡವರ ನಡುವೆ ಕುಳಿತು ಅವರ ಸಂಕಷ್ಟ ಅರಿತುಕೊಳ್ಳುವ ಕೆಲಸ ಮಾಡಿದ್ದೇವೆ. ನಮ್ಮ ಹೋರಾಟದ ಫಲವಾಗಿ ವಿಶೇಷ ಅಧಿವೇಶನವನ್ನು ಸಿಎಂ ಕರೆದಿದ್ದಾರೆ ಎಂದು ಹೇಳಿದರು.

ಕಳೆದ ಮೂರು ಕಾಲು ವರ್ಷದಲ್ಲಿ ಬಡವನಿಗೆ ಮನೆ, ಗಂಗಾ ಕಲ್ಯಾಣ ಅಂಗವಿಕಲರಿಗೆ ಪಿಂಚಣಿ ಕೊಡುತ್ತಿಲ್ಲ. ಯೋಜನೆಗಳಿಗೆ ಹಣ ಇಲ್ಲ ಎಂದು ಅಬಕಾರಿ ದರ ಏರಿಕೆ ಮಾಡಲಾಗಿದೆ. 2028ರಲ್ಲಿ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದೇ ಬರುತ್ತದೆ. ಯಡಿಯೂರಪ್ಪ ಅವರ ಆಡಳಿತದ ಗತ ವೈಭವ ಬರುತ್ತದೆ. ರೈತರಿಗೆ ಸರಿಯಾದ ವಿದ್ಯುತ್ ನೀಡಿ ಎಂದು ವಿದ್ಯುತ್ ಸಚಿವರಿಗೆ ಪತ್ರ ಬರೆದಿದ್ದೇನೆ. ಜನರ, ಬಡವರ, ರೈತರ, ಯುವಕರ, ಮಹಿಳಾ ವಿರೋಧಿ ಸರ್ಕಾರ ರಾಜ್ಯದಲ್ಲಿದೆ ಎಂದರು.

ಭಾರತ್ ಜೋಡೊ ಎಂಬ ಕಪಟ ನಾಟಕದ ಮೂಲಕ ಮತ್ತೆ ಅಧಿಕಾರಕ್ಕೆ ಬರಲು ಯತ್ನಿಸುತ್ತಿದೆ. ಅದು ಮುಂದೆ ಆಗುವುದಿಲ್ಲ. ಮುಂದಿನ ಒಂದೂವರೆ ವರ್ಷ ಹೋರಾಟದ ದಿನಗಳಾಗುತ್ತವೆ ಎಂದು ಹೇಳಿದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ಇದು ಕಣ್ಣು ಕಿವಿ ಇಲ್ಲದ ಖಾಲಿ ಡಬ್ಬದ ಸರ್ಕಾರವಾಗಿದೆ. ಬೇಕೇ ಬೇಕು ವಿದ್ಯುತ್ ಬೇಕು, ಕೆರೆಗಳಿಗೆ ನೀರು ಬೇಕೇ ಬೇಕು. ಬೇಡ ಬೇಡ ಕಸ್ತೂರಿ ರಂಗನ್ ವರದಿ ಬೇಡ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ಅತ್ಯಂತ ಅಹಸ್ಯವಾಗಿ, ಯೋಗ್ಯತೆ ಮೀರಿ ರೈತ ನಾಯಕ ಯಡಿಯೂರಪ್ಪನವರನ್ನು ಪ್ರಶ್ನೆ ಮಾಡುವ ಪ್ರಯುತ್ನವನ್ನು ಮಾಡಿದ್ದಾರೆ. ಹೀಗೆ ಮಾಡುತ್ತಿದ್ರೆ, ಬಿಚ್ಚಿಡುತ್ತೇನೆ ಅಂತ ಹೇಳಿದ್ದಾರೆ. ಪ್ರಜಾಸೇವೆಗೆ ಮಂತ್ರಿಗಳು ಬರಬೇಕೇ. ಅವರು ಶೇ. 90ರಷ್ಟು ಅರ್ಜಿ ಬಗರ್ ಹುಕುಂ ಅರ್ಜಿ ಎಂದು ಹೇಳಿದ್ದಾರೆ. ನಾನು ಅವರ ಪಕ್ಕದಲ್ಲಿಯೇ ಉಳಿದ್ದಿದ್ದೆ. ಕೇವಲ ಒಂದೇ ಒಂದು ಬಗರ್ ಹುಕುಂ ಅರ್ಜಿ ಬಂದಿತ್ತು. ನಾನು ಶಿಕಾರಿಪುರದ ಅಭಿವೃದ್ಧಿ ಪಟ್ಟಿ ತರುತ್ತೇನೆ. ನೀನು ಸೊರಬದ ಪಟ್ಟಿ ತೆಗೆದುಕೊಂಡು ಬಾ ಎಂದು ಬಹಿರಂಗ ಸವಾಲು ಹಾಕಿದರು.

ಅಂದು ಯಡಿಯೂರಪ್ಪನವರ ತಲೆ ಒಡೆಯುವ ಕೆಲಸವನ್ನು ಕಾಂಗ್ರೆಸ್ ಪುಡಾರಿಗಳು ಮಾಡಿದ್ರು, ಇದರಿಂದ ಇಂದು ಶಿಕಾರಿಪುರದಲ್ಲಿ ನೀರಾವರಿ ಯೋಜನೆ ಆಗಿದೆ. ಕಂದಾಯ ಭೂಮಿಯಲ್ಲಿ ಇರುವ ಬಗರ್ ಹುಕುಂದಾರರಿಗೆ ಹಕ್ಕುಪತ್ರ ನೀಡಲಾಗಿದೆ. ನೀನು ಸೊರಬದಲ್ಲಿ ಏನ್ ಮಾಡಿದ್ದೀಯಾ ಎಂದು ಮೊದ್ಲು ತೋರಿಸು ಎಂದರು.

3ನೇ ಪುಟ.....

ಸೆ.20ರಂದು ಕೆ. ಶಾಂತಪ್ಪ ಜಿಲ್ಲಾಧ್ಯಕ್ಷರಾಗಿ ಪದಗ್ರಹಣ

ರಾಯಚೂರು, ಸೆ.18:

ಕಾಂಗ್ರೆಸ್ ಪಕ್ಷದ ಹಿರಿಯರ ಅಭಿಪ್ರಾಯದಂತೆ ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಜಿಲ್ಲಾಧ್ಯಕ್ಷರಾಗಿ ತಮ್ಮನ್ನು ಆಯ್ಕೆ ಮಾಡಿರುವುದಕ್ಕೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವೇಣು ಗೋಪಾಲ್, ಡಿ.ಕೆ. ಶಿವಕುಮಾರ್, ಹರಿಪ್ರಸಾದ್, ಸಿದ್ದರಾಮಯ್ಯ, ಕೆ. ಕುಮಾರನಾಯಕ, ವಸಂತಕುಮಾರ್ ಹಂಪನಗೌಡ ಬಾದರ್ಲಿ ಸೇರಿದಂತೆ ಜಿಲ್ಲೆಯ ಎಲ್ಲ ಹಿರಿಯ ಮುಖಂಡರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ನೂತನ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪ ಧನ್ಯವಾದ



ಸಲ್ಲಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಪದಗ್ರಹಣ ಕಾರ್ಯಕ್ರಮವನ್ನು ಸೆ.20ರಂದು ಭಾನುವಾರ ಬೆಳಿಗ್ಗೆ 10 ಗಂಟೆಗೆ ರಾಯಚೂರು ನಗರದ ಗಂಜಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಕಾಂಗ್ರೆಸ್ ಪಕ್ಷದ ಎಲ್ಲ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಎರಡು ವರ್ಷಗಳ ಹಿಂದೆ ಎಐಸಿಸಿ ಸಭೆಯಲ್ಲಿ ಪಕ್ಷದಲ್ಲಿ ಪ್ರಮುಖ ಬದಲಾವಣೆಗಳನ್ನು ತರಲು ಹಾಗೂ ಪಕ್ಷವನ್ನು ತಳಮಟ್ಟದಿಂದ ಸದೃಢಗೊಳಿಸುವ ಉದ್ದೇಶದಿಂದ ಸಂಘಟನಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಭಾಗವಾಗಿ ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು. ಈ ಹಿಂದೆ ಜಿಲ್ಲಾಧ್ಯಕ್ಷರನ್ನು ಆಯಾ ಜಿಲ್ಲೆಯ ಮುಖಂಡರು ಆಯ್ಕೆ ಮಾಡುತ್ತಿದ್ದರು. ಆದರೆ ಈ ಬಾರಿ ಪಕ್ಷದ ತಳಮಟ್ಟದ ಕಾರ್ಯಕರ್ತರಿಂದ ಹಿಡಿದು ಮುಖಂಡರು,

ಶಾಸಕಿ ಕಾರು ತಡೆದು ಹಾನಿ: ಜೆಡಿಎಸ್ ಕಾರ್ಯಕರ್ತರಿಂದ ಚನ್ನಪ್ಪ ಮಸೀದಾಪುರ ಖಂಡನೆ

ಮಲದಕಲ್‌ನಲ್ಲಿ 'ಗೋ ಬ್ಯಾಕ್' ಪ್ರತಿಭಟನೆ ; ಪೊಲೀಸರ ನಿರ್ಲಕ್ಷ್ಯಕ್ಕೆ ಆಕ್ರೋಶ

ರಾಯಚೂರು, ಸೆ.18–

ದೇವ ದುರ್ಗ ತಾಲೂಕಿನ ಮಲ್ದಕಲ್ ಗ್ರಾಮದಲ್ಲಿ ಸೆ.15ರಂದು ನೂತನ ಶಾಲಾ ಕಟ್ಟಡ ಉದ್ಘಾಟನೆಗೆ ತೆರಳಿದ್ದ ಶಾಸಕಿಗೆ ಕೆಲವರು 'ಗೋ ಬ್ಯಾಕ್' ಘೋಷಣೆ ಕೂಗಿ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸಿರುವುದು ಖಂಡನೀಯ ಎಂದು ಜೆಡಿಎಸ್ ಮುಖಂಡ ಚನ್ನಪ್ಪ ಮಸೀದಾಪುರ ಹೇಳಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕಿ ಕರೆಮ್ಮ ನಾಯಕ ಗ್ರಾಮಕ್ಕೆ ಆಗಮಿಸಿದಾಗ ಬಹುತೇಕ ಗ್ರಾಮಸ್ಥರು ಸ್ವಾಗತಿಸಿದರು. ಆದರೆ ಕೆಲ



ಸ್ವಪಕ್ಷೀಯರು ಸೇರಿದಂತೆ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಶಾಸಕಿ ಅವರ ಕಾರನ್ನು ತಡೆದು ಹಾನಿಗೊಳಿಸಿದ್ದಾರೆ ಎಂದು ಆರೋಪಿಸಿದರು.

ನಿಂಗಪ್ಪ, ಬಾಬು ನಾಯಕ, ದಾದಾಪೀರ್ ಸೇರಿದಂತೆ ಕೆಲವರು ಉದ್ದೇಶ ಪೂರ್ವಕವಾಗಿ ಪ್ರತಿಭಟನೆ ನಡೆಸಿದ್ದು, ಶೌಚಾಲಯ ನಿರ್ಮಾಣದ ವಿಚಾರ ನೆಪ ಮಾಡಿಕೊಂಡಿದ್ದಾರೆ ಎಂದು ದೂರಿದರು. ಪ್ರತಿಭಟನೆಗೆ ಕೂಲಿ ಕಾರ್ಮಿಕರಿಗೆ ಹಣ ನೀಡಿ ಕರೆತರಲಾಗಿದೆ ಎಂಬ ಆರೋಪವನ್ನೂ ಮಾಡಿದರು.ಸ್ಥಳದಲ್ಲಿ ಪೊಲೀಸರು ಹಾಗೂ ಬಂದೋಬಸ್ತ್ ವ್ಯವಸ್ಥೆ ಇದ್ದರೂ ಕಾರು ತಡೆಯುವ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳದಿರುವುದು ಖಂಡನೀಯ. ಪ್ರತಿಭಟನೆ ನಡೆಯುವ ಕುರಿತು ಮುಂಚಿತವಾಗಿಯೇ ಪೊಲೀಸರಿಗೆ ಮಾಹಿತಿ ಇದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಚನ್ನಪ್ಪ ಮಸೀದಾಪುರ ಆರೋಪಿಸಿದರು.

ಗೌಡೂರು ಸರ್ಕಾರಿ ಜಮೀನು ಅತಿಕ್ರಮಣ ತಡೆಗೆ ಕ್ರಮ ಕೈಗೊಳ್ಳಬೇಕು

ಸ್ಮಶಾನಕ್ಕೆ ಮೀಸಲಾದ 2 ಎಕರೆ ಜಮೀನಿನ ಹದ್ದುಬಸ್ತು ಪೂರ್ಣ ಸಾರ್ವಜನಿಕರಿಗೆ ಅನುಕೂಲ

ಲಿಂಗಸುಗೂರು: ತಾಲ್ಲೂಕಿನ ಗುರುಗುಂಟಾ ಹೋಬಳಿಯ ಗೌಡೂರು ಗ್ರಾಮದ ಸರ್ವೇ ನಂ.206ರಲ್ಲಿರುವ ಸರ್ಕಾರಿ ಜಮೀನನ್ನು ಅತಿಕ್ರಮಣದಿಂದ ರಕ್ಷಿಸಿ, ಅರ್ಹ ಬಡವರು, ದೇವದಾಸಿ ಮಹಿಳೆಯರು, ಅಂಗವಿಕಲರು ಹಾಗೂ ವಸತಿರಹಿತ ಕುಟುಂಬಗಳಿಗೆ ಸರ್ಕಾರದ ನಿಯಮಾನುಸಾರ ವಸತಿ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ತಾಲ್ಲೂಕು ವರದಿಗಾರರಾದ ವಿದ್ಯಾಸಾಗರ ವಿ. ನಾಯಕ ಸೇರಿದಂತೆ ಗೌಡೂರು ಗ್ರಾಮದ ನಾಗರಿಕರು ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ.

ಗೌಡೂರು ಗ್ರಾಮದ ಸರ್ವೇ ನಂ.206ರಲ್ಲಿ ಒಟ್ಟು 49 ಎಕರೆ 24 ಗುಂಟೆ ಜಮೀನು ಇದ್ದು, ಈ ಪೈಕಿ ಸುಮಾರು 17 ಎಕರೆ ಜಮೀನು ಸಾಗುವಳಿದಾರರ ಅನುಭವದಂತೆ ಮಂಜೂರಾಗಿರುವುದಾಗಿ ತಿಳಿದುಬಂದಿದ್ದು, ಉಳಿದ ಸುಮಾರು 32 ಎಕರೆ 24 ಗುಂಟೆ ಸರ್ಕಾರಿ ಜಮೀನು ಇರುವುದಾಗಿ ಮನವಿಯಲ್ಲಿ ತಿಳಿಸಲಾಗಿದೆ.

ಈ ಸರ್ಕಾರಿ ಜಮೀನಿನ ಪೈಕಿ 2 ಎಕರೆ ಜಮೀನನ್ನು ಸಾರ್ವಜನಿಕ ಸ್ಮಶಾನಕ್ಕಾಗಿ ಕಾಯ್ದಿರಿಸಿ ಜಿಲ್ಲಾಧಿಕಾರಿಗಳು, ರಾಯಚೂರು ಅವರು 24/12/2021ರಂದು ಆದೇಶ ಹೊರಡಿಸಿದ್ದರು. ಈ ಜಮೀನಿನ ಹದ್ದಬಸ್ತು ಹಾಗೂ ಗಡಿರೇಖೆ ಗುರುತಿಸುವಂತೆ 21/07/2026ರಂದು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗಿತ್ತು. ಅದರಂತೆ ತಹಶೀಲ್ದಾರರು 29/08/2026ರಂದು ತಾಲ್ಲೂಕು ಸರ್ವೇಯರ್, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ



ಲೆಕ್ಕಾಧಿಕಾರಿಗಳನ್ನು ಸರ್ವೇ ಕಾರ್ಯಕ್ಕೆ ನಿಯೋಜಿಸಿದ್ದರು.

ಅಧಿಕಾರಿಗಳು ಗ್ರಾಮಸ್ಥರು ಹಾಗೂ ಅರ್ಜಿದಾರರ ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಸ್ಮಶಾನಕ್ಕಾಗಿ ಕಾಯ್ದಿರಿಸಿದ 2 ಎಕರೆ ಜಮೀನಿನ ಗಡಿರೇಖೆ ಗುರುತಿಸಿ ಹದ್ದುಬಸ್ತು ಕಾರ್ಯ ಪೂರ್ಣಗೊಳಿಸಿರುವುದಕ್ಕೆ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ. ಇದರಿಂದ ಗ್ರಾಮಸ್ಥರು ತಮ್ಮ ಕುಟುಂಬದ ಮೃತರ ಅಂತ್ಯಕ್ರಿಯೆಗಳನ್ನು ಸಾರ್ವಜನಿಕ ಸ್ಮಶಾನದ ಜಮೀನಿನಲ್ಲಿ ಯಾವುದೇ ಅಡೆತಡೆಯಿಲ್ಲದೆ ನಡೆಸಲು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಉಳಿದ ಸರ್ಕಾರಿ ಜಮೀನು ಅತಿಕ್ರಮಣದಿಂದ ರಕ್ಷಿಸಲು ಆಗ್ರಹ

ಸ್ಮಶಾನಕ್ಕಾಗಿ ಕಾಯ್ದಿರಿಸಿದ 2 ಎಕರೆ ಜಮೀನನ್ನು ಹೊರತುಪಡಿಸಿ ಉಳಿದಿರುವ ಸುಮಾರು 32 ಎಕರೆ 24 ಗುಂಟೆ ಸರ್ಕಾರಿ ಜಮೀನಿನ ಸಂರಕ್ಷಣೆ ಅಗತ್ಯವಾಗಿದೆ ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕೆಲವರು ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಪ್ರವೇಶಿಸಿ ಹಿಟಾಚಿ ಯಂತ್ರದ ಮೂಲಕ ಜಮೀನು ಸ್ವಚ್ಛಗೊಳಿಸುವುದು, ಕಲ್ಲುಗಳನ್ನು ತೆರವುಗೊಳಿಸುವುದು ಹಾಗೂ ಜಮೀನಿನ ವಿವಿಧ ಭಾಗಗಳನ್ನು ತಮ್ಮ ಸ್ವಾಧೀನದಲ್ಲಿರುವಂತೆ ಗುರುತು ಮಾಡಿಕೊಳ್ಳುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿಬರುತ್ತಿವೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

3ನೇ ಪುಟ.....

ದೇವದುರ್ಗ ಕೆಬಿಜೆಎನ್‌ಎಲ್ ಚಿಕ್ಕಹೊನ್ನಕುಣಿ ಕಚೇರಿ ಸ್ಥಳಾಂತರ ಖಂಡಿಸಿ ಸೆ.28ರಂದು ಧರಣಿ ಸತ್ಯಾಗ್ರಹ : ಶಾಸಕಿ ಕರೆಮ್ಮ...

ದೇವದುರ್ಗ: ತಾಲೂಕಿನ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್) ನಾರಾಯಣಪುರ ಬಲದಂಡೆ ಕಾಲುವೆ ವಿಭಾಗ-6ರ ಚಿಕ್ಕಹೊನ್ನಕುಣಿ ಕಚೇರಿಯನ್ನು ರಾಯಚೂರಿಗೆ ಸ್ಥಳಾಂತರಿಸಿರುವ ಸರ್ಕಾರದ ನಿರ್ಧಾರವನ್ನು ಖಂಡಿಸಿ ಸೆಪ್ಟೆಂಬರ್ 28ರಂದು ಚಿಕ್ಕಹೊನ್ನಕುಣಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ದೇವದುರ್ಗ ಶಾಸಕಿ ಕರೆಮ್ಮ ಜಿ. ನಾಯಕ್ ತಿಳಿಸಿದರು.



ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಪ್ರದೇಶಗಳಲ್ಲಿ ಒಂದಾಗಿದ್ದು, ಈ ಭಾಗದ ರೈತರಿಗೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು ಹಾಗೂ ನೀರಾವರಿ ಯೋಜನೆಗಳಿಂದ ಮುಳುಗಡೆಯಾದ ಮತ್ತು ತೊಂದರೆಗೊಳಗಾದ ಗ್ರಾಮಗಳ ಜನರಿಗೆ ಪುನರ್ವಸತಿ ಮತ್ತು ಪರಿಹಾರ ಒದಗಿಸುವ ಜವಾಬ್ದಾರಿ ಈ ಕಚೇರಿಯ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿದರು.

ಚಿಕ್ಕಹೊನ್ನಕುಣಿ ಕಚೇರಿಯನ್ನು ರಾಯಚೂರು ಜಿಲ್ಲಾ ಕೇಂದ್ರಕ್ಕೆ ಸ್ಥಳಾಂತರಿಸುವುದರಿಂದ ರಾಯಚೂರು, ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಗಳ ರೈತರಿಗೆ ತೀವ್ರ ತೊಂದರೆಯಾಗಲಿದೆ. ದೇವದುರ್ಗದಿಂದ ರಾಯಚೂರಿಗೆ ಸುಮಾರು 60 ಕಿ.ಮೀ., ಯಾದಗಿರಿಯಿಂದ 60 ಕಿ.ಮೀ. ಹಾಗೂ ಕಲಬುರಗಿಯಿಂದ ಸುಮಾರು 115 ಕಿ.ಮೀ. ದೂರ ಪ್ರಯಾಣಿಸಬೇಕಾಗುತ್ತದೆ. ಸಣ್ಣಪುಟ್ಟ ಕೆಲಸಗಳಿಗೂ ರೈತರು ದೂರದೂರಿಗೆ ಅಲೆದಾಡಬೇಕಾಗಿದ್ದು, ಒಂದೇ ದಿನದಲ್ಲಿ ಹೋಗಿ ಬರುವುದು ಸಾಧ್ಯವಾಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾವು ಸಾಮಾನ್ಯ

3ನೇ ಪುಟ.....

ಕಲ್ಯಾಣ ಕರ್ನಾಟಕ 1,917 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಚಾಲನೆ



ಕಲಬುರಗಿ,ಸೆ.18-

ಇಲ್ಲಿನ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ 79ನೇ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಿಗೆ ಸಂಬಂಧಿಸಿದ ಒಟ್ಟು 1,917.13 ಕೋಟಿ ರೂ. ಮೊತ್ತದ 940 ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಈ ಪೈಕಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ವತಿಯಿಂದ 768.75 ಕೋಟಿ ರೂ. ಮೊತ್ತದ 687 ಕಾಮಗಾರಿಗಳು ಹಾಗೂ ವಿವಿಧ ಇಲಾಖೆಗಳ ಮೂಲಕ 1,148.38 ಕೋಟಿ ರೂ. ಮೊತ್ತದ 253 ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಜಿಲ್ಲಾವಾರು ಕಾಮಗಾರಿಗಳಲ್ಲಿ ಬೀದರ್ ಜಿಲ್ಲೆಯಲ್ಲಿ 178.86 ಕೋಟಿ ರೂ. ಮೊತ್ತದ 74 ಕಾಮಗಾರಿಗಳು, ಕಲಬುರಗಿ ಜಿಲ್ಲೆಯಲ್ಲಿ 1,105.63 ಕೋಟಿ ರೂ. ಮೊತ್ತದ 223 ಕಾಮಗಾರಿಗಳು, ಯಾದಗಿರಿ ಜಿಲ್ಲೆಯಲ್ಲಿ 48.62 ಕೋಟಿ ರೂ. ಮೊತ್ತದ 72 ಕಾಮಗಾರಿಗಳು, ರಾಯಚೂರು ಜಿಲ್ಲೆಯಲ್ಲಿ 184.21 ಕೋಟಿ ರೂ. ಮೊತ್ತದ 213 ಕಾಮಗಾರಿಗಳು, ಕೊಪ್ಪಳ ಜಿಲ್ಲೆಯಲ್ಲಿ 258.03 ಕೋಟಿ ರೂ. ಮೊತ್ತದ 293 ಕಾಮಗಾರಿಗಳು, ಬಳ್ಳಾರಿ ಜಿಲ್ಲೆಯಲ್ಲಿ 122.39 ಕೋಟಿ ರೂ. ಮೊತ್ತದ 42 ಕಾಮಗಾರಿಗಳು ಹಾಗೂ ವಿಜಯನಗರ ಜಿಲ್ಲೆಯಲ್ಲಿ 19.36 ಕೋಟಿ ರೂ. ಮೊತ್ತದ 23 ಕಾಮಗಾರಿಗಳು ಸೇರಿವೆ.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ವತಿಯಿಂದ 33.35 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲಾಗುತ್ತಿರುವ 56 ಬಸ್‌ಗಳ ಪೈಕಿ ಮೊದಲ ಹಂತದಲ್ಲಿ ಸಿದ್ಧಗೊಂಡ 24 ನೂತನ ಬಸ್‌ಗಳಿಗೆ ಚಾಲನೆ ನೀಡಿದರು. ಮಿನಿ ಕಲ್ಯಾಣ ರಥ, ಅಮೋಘವರ್ಷ ಹಾಗೂ ಎಕ್ಸಿಕ್ಯೂಟಿವ್ ಚೇರ್ ಕಾರ್ ಹೆಸರಿನ ಈ ಬಸ್‌ಗಳನ್ನು -052, -119 ಮತ್ತು -153 ಆಟೋಮೋಟಿವ್ ಸುರಕ್ಷತಾ ಮಾನದಂಡಗಳಂತೆ ತಯಾರಿಸಲಾಗಿದೆ.

ಪ್ರಯಾಣಿಕರ ಸುರಕ್ಷತೆ ಮತ್ತು ಅನುಕೂಲಕ್ಕಾಗಿ ಸ್ವಯಂಚಾಲಿತ ಅಗ್ನಿಶಾಮಕ ಉಪಕರಣ, ವೆಹಿಕಲ್ ಟ್ರ್ಯಾಕಿಂಗ್ ವ್ಯವಸ್ಥೆ, ಪ್ಯಾನಿಕ್ ಬಟನ್, ರಿವರ್ಸ್ ಪಾರ್ಕಿಂಗ್ ಅಲಾರಂ, ಎಲ್‌ಇಡಿ ಡಿಸ್ಪ್ಲೇ ಬೋರ್ಡ್, ಸಿಸಿ ಕ್ಯಾಮೆರಾಗಳು, ರೀಡಿಂಗ್ ಲ್ಯಾಂಪ್ ಹಾಗೂ ಮೊಬೈಲ್ ಚಾರ್ಜಿಂಗ್ ಸೌಲಭ್ಯಗಳನ್ನು ಬಸ್‌ಗಳಲ್ಲಿ ಅಳವಡಿಸಲಾಗಿದೆ. ಎಲ್ಲಾ ಮಾದರಿಯ ಬಸ್‌ಗಳಿಗೆ ಆಲ್-ವೀಲ್ ಏರ್ ಸಸ್ಪೆನ್ಷನ್ ವ್ಯವಸ್ಥೆಯನ್ನೂ ಒದಗಿಸಲಾಗಿದೆ.

ಉತ್ಸವದ ಅಂಗವಾಗಿ ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆಗಳನ್ನು ಪರಿಚಯಿಸುವ ಆಕರ್ಷಕ ಸ್ತಬ್ಧಚಿತ್ರಗಳ ಪ್ರದರ್ಶನವೂ ನಡೆಯಿತು. ಶಾಲಾ ಶಿಕ್ಷಣ ಇಲಾಖೆಯ ಅಕ್ಷರ ಆವಿಷ್ಕಾರ, ಆರೋಗ್ಯ ಇಲಾಖೆಯ ಆರೋಗ್ಯ ಆವಿಷ್ಕಾರ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗಳ ಮಾದರಿ ವಸತಿ ಶಾಲೆಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಲ್ಯಾಣ ಪಥ ಮತ್ತು ಪ್ರಗತಿ ಪಥ, ಜೆಸ್ಕಾಂನ ಗೃಹ ಜ್ಯೋತಿ ಹಾಗೂ ಕೆಕೆಆರ್‌ಟಿಸಿಯ ಶಕ್ತಿ ಮತ್ತು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಗಳ ಕುರಿತ ಸ್ತಬ್ಧಚಿತ್ರಗಳು ಸಾರ್ವಜನಿಕರ ಗಮನ ಸೆಳೆದವು.

ಪ್ರತಿ ಸ್ತಬ್ಧಚಿತ್ರದ ಮುಂದೆ ವಿವಿಧ ಕಲಾತಂಡಗಳು ಸಾಂಸ್ಕೃತಿಕ ಪ್ರದರ್ಶನಗಳನ್ನು ನೀಡಿದ್ದು, ನೆರೆದಿದ್ದ ಸಾರ್ವಜನಿಕರನ್ನು ರಂಜಿಸಿದವು.

ಕಲ್ಯಾಣ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ಇನ್ನೂ ನಿವಾರಣೆಯಾಗಿಲ್ಲ: ಡಾ.ಸಂಗೀತಾ ಕಟ್ಟಿಮನಿ

ಕಲಬುರಗಿ,ಸೆ.18-

ಕಲ್ಯಾಣ ಕರ್ನಾಟಕ ಪ್ರದೇಶವು ಹಲವು ಕ್ಷೇತ್ರಗಳಲ್ಲಿ ಇಂದಿಗೂ ಹಿಂದುಳಿದ ಸ್ಥಿತಿಯಲ್ಲಿದ್ದು, ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ನಿರೀಕ್ಷಿತ ಮಟ್ಟದಲ್ಲಿ ಪರಿಣಾಮಕಾರಿಯಾಗಿಲ್ಲ ಎಂದು ಖ್ಯಾತ ಅರ್ಥಶಾಸ್ತ್ರಜ್ಞೆ ಹಾಗೂ ಗೋವಿಂದರಾವ್ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸದಸ್ಯೆ ಡಾ. ಸಂಗೀತಾ ಕಟ್ಟಿಮನಿ ಹೇಳಿದರು.



ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ವತಿಯಿಂದ ಗುರುವಾರ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

2002ರಲ್ಲಿ ನಂಜುಂಡಪ್ಪ ಸಮಿತಿ ಗುರುತಿಸಿದ್ದ ಅತ್ಯಂತ ಹಿಂದುಳಿದ ತಾಲೂಕುಗಳ ಸಂಖ್ಯೆ ಹಾಗೂ ಪ್ರಸ್ತುತ ಗೋವಿಂದರಾವ್ ಸಮಿತಿ ಗುರುತಿಸಿರುವ ತಾಲೂಕುಗಳ ಸಂಖ್ಯೆಯಲ್ಲಿ ಹೆಚ್ಚಿನ ಬದಲಾವಣೆ ಕಂಡುಬಂದಿಲ್ಲ. ನಂಜುಂಡಪ್ಪ ಸಮಿತಿಯು ಅಂದಿನ 31 ತಾಲೂಕುಗಳ ಪೈಕಿ 21 ತಾಲೂಕುಗಳನ್ನು ಅತ್ಯಂತ ಹಿಂದುಳಿದ ತಾಲೂಕುಗಳೆಂದು ಗುರುತಿಸಿತ್ತು. ಇದೀಗ ಗೋವಿಂದ ’ರಾವ್ ಸಮಿತಿಯು ಕಲ್ಯಾಣ ಕರ್ನಾಟಕದ ಒಟ್ಟು 50 ತಾಲೂಕುಗಳ ಪೈಕಿ 39 ತಾಲೂಕುಗಳನ್ನು ಅತ್ಯಂತ ಹಿಂದುಳಿದ ತಾಲೂಕುಗಳೆಂದು ಗುರುತಿಸಿರುವುದು ಈ ಭಾಗದ ಹಿಂದುಳಿದ ಸ್ಥಿತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕವು ಚಿನ್ನ, ಯುರೇನಿಯಂ ಸೇರಿದಂತೆ ಅಪಾರ ಖನಿಜ ಸಂಪತ್ತನ್ನು ಹೊಂದಿದೆ. ಬಳ್ಳಾರಿಯ ಕಬ್ಬಿಣದ ಅದಿರು, ಕಲಬುರಗಿಯ ಪೌಷ್ಟಿಕಾಂಶಯುಕ್ತ ತೊಗರಿ ಹಾಗೂ ಅವಿಭಜಿತ ರಾಯಚೂರು ಜಿಲ್ಲೆಯ ಗಂಗಾವತಿಯ ಉತ್ತಮ ಗುಣಮಟ್ಟದ ಭತ್ತ ಸೇರಿದಂತೆ ಹಲವು ಸಂಪನ್ಮೂಲಗಳಿದ್ದರೂ, ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಈ ಪ್ರದೇಶದ ತಲಾ ಆದಾಯ ಕಡಿಮೆಯಾಗಿದೆ ಎಂದು ತಿಳಿಸಿದರು.

ಈ ಪ್ರದೇಶದಲ್ಲಿ 7,800ಕ್ಕೂ ಅಧಿಕ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪತ್ರಿಕಾ ವರದಿಯೊಂದರ ಪ್ರಕಾರ 255 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲದಿರುವುದು ಶಿಕ್ಷಣ ಕ್ಷೇತ್ರದ ಗಂಭೀರ ಪರಿಸ್ಥಿತಿಯನ್ನು ತೋರಿಸುತ್ತದೆ ಎಂದು ಡಾ. ಕಟ್ಟಿಮನಿ ಹೇಳಿದರು.

ಕಲ್ಯಾಣ ಕರ್ನಾಟಕ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಅಪೌಷ್ಟಿಕತೆಯೂ ಒಂದಾಗಿದೆ. ಇತ್ತೀಚಿನ ಎನ್‌ಎಫ್‌ಎಚ್‌ಎಸ್ ವರದಿಯ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಶೇ.46ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಭಾಗದ ಡೀನ್ ಟಿವಿ ಶಿವಾನಂದನ್, ಪ್ರಾಧ್ಯಾಪಕಿ ಸುನೀತಾ ಪಾಟೀಲ್, ಸುಮಂಗಲಾ ರೆಡ್ಡಿ ಮತ್ತಿತರರು ಇದ್ದರು.

ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳ ಸಮಸ್ಯೆ ಪರಿಹರಿಸಲು ಆಗ್ರಹಿಸಿ ಪ್ರತಿಭಟನೆ; ಸಿಎಂ ಗೆ ಮುತ್ತಿಗೆ ಯತ್ನ; ಎಸ್‌ಎಫ್‌ಐ

ಕಲಬುರಗಿ,ಸೆ.18-

ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಹಾಗೂ ಮೂಲಸೌಕರ್ಯ ಸಮಸ್ಯೆಗಳು ತೀವ್ರವಾಗಿದ್ದು, ರಾಜ್ಯ ಸರ್ಕಾರ ತಕ್ಷಣ ಅವುಗಳನ್ನು ಪರಿಹರಿಸಬೇಕು ಎಂದು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕಲಬುರಗಿ ಜಿಲ್ಲಾ ಸಮಿತಿ ವತಿಯಿಂದ ಗುರುವಾರ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಮುತ್ತಿಗೆ ಹಾಕಲು ಯತ್ನಿಸಿದ ವೇಳೆ ಅವರನ್ನು ಪೊಲೀಸರು ವಶಕ್ಕೆ ಪಡೆದಿರುವ ಘಟನೆ ನಡೆಯಿತು.



ರಾಜ್ಯ ಸರ್ಕಾರದ ಅಂಕಿಅಂಶಗಳ ಪ್ರಕಾರ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 8,706 ಸರ್ಕಾರಿ ಶಾಲಾ ಕೊಠಡಿಗಳು ಶಿಥಿಲಗೊಂಡಿವೆ. ಈ ಪೈಕಿ 7,419 ಪ್ರಾಥಮಿಕ ಹಾಗೂ 1,287 ಪ್ರೌಢಶಾಲಾ ಕೊಠಡಿಗಳು ಅಸುರಕ್ಷಿತ ಸ್ಥಿತಿಯಲ್ಲಿವೆ. ಶಿಥಿಲ ಕಟ್ಟಡಗಳಲ್ಲಿಯೇ ತರಗತಿಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸುರಕ್ಷತೆ ಕುರಿತು ಗಂಭೀರ ಆತಂಕವಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾವಾರು ಅಂಕಿಅಂಶದಂತೆ ಕಲಬುರಗಿಯಲ್ಲಿ 2,334, ಯಾದಗಿರಿಯಲ್ಲಿ 1,451, ಬೀದರ್‌ನಲ್ಲಿ 1,315, ವಿಜಯನಗರದಲ್ಲಿ 1,075, ಕೊಪ್ಪಳದಲ್ಲಿ 1,036, ಬಳ್ಳಾರಿಯಲ್ಲಿ 756 ಹಾಗೂ ರಾಯಚೂರಿನಲ್ಲಿ 739 ಶಾಲಾ ಕೊಠಡಿಗಳು ಶಿಥಿಲಗೊಂಡಿವೆ ಎಂದು ಅವರು ತಿಳಿಸಿದರು.

371(ಜೆ) ಸಮರ್ಪಕವಾಗಿ ಜಾರಿಗೊಳಿಸಲು ಆಗ್ರಹ:

ಎಸ್‌ಎಫ್‌ಐ ಕೇಂದ್ರ ಸಮಿತಿ ಸದಸ್ಯೆ ಸುಜಾತ ವೈ. ಮಾತನಾಡಿ, ಸಂವಿಧಾನದ 371(ಜೆ) ಅಡಿಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ನೀಡಿರುವ ವಿಶೇಷ ಸ್ಥಾನಮಾನದ ಉದ್ದೇಶ ಈ ಭಾಗದ ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಅವಕಾಶಗಳನ್ನು ಖಾತ್ರಿಪಡಿಸುವುದಾಗಿದೆ. ಆದರೆ 371(ಜೆ) ಅನುಷ್ಠಾನದಲ್ಲಿನ ಹಲವು ಸಮಸ್ಯೆಗಳಿಂದಾಗಿ ವಿದ್ಯಾರ್ಥಿಗಳು ತಮ್ಮ ಹಕ್ಕಿನ ಅವಕಾಶಗಳನ್ನು ಪಡೆಯಲು ಪರದಾಡುವಂತಾಗಿದೆ ಎಂದು ಆರೋಪಿಸಿದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಸರ್ವೇಶ್ ಪಿ. ಮಾವಿನಕರ್ ಮಾತನಾಡಿ, ಕಲ್ಯಾಣ ಕರ್ನಾಟಕದಲ್ಲಿ ಸರ್ಕಾರಿ ಶಾಲಾ-ಕಾಲೇಜುಗಳ ಮೂಲಸೌಕರ್ಯ ಕೊರತೆ, ಶಿಕ್ಷಕರು ಮತ್ತು ಉಪನ್ಯಾಸಕರ ಖಾಲಿ ಹುದ್ದೆಗಳು,

ಹಾಸ್ಟೆಲ್‌ಗಳ ಕೊರತೆ, ವಿದ್ಯಾರ್ಥಿವೇತನ ವಿಳಂಬ ಹಾಗೂ ಸಾರಿಗೆ ಸಮಸ್ಯೆಗಳು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಡ್ಡಿಯಾಗುತ್ತಿವೆ ಎಂದರು.

ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯ ಇಮಾಮ್‌ಸಾಬ್ ನದಾಫ್ ಮಾತನಾಡಿ, ದೂರದ ಗ್ರಾಮಗಳಿಂದ ಪ್ರತಿದಿನ ಶಾಲಾ-ಕಾಲೇಜುಗಳಿಗೆ ಪ್ರಯಾಣಿಸುವುದು ಕಷ್ಟವಾಗಿರುವುದರಿಂದ ಅನೇಕ ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧದಲ್ಲೇ ನಿಲ್ಲಿಸುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬಸ್‌ಗಳ ಕೊರತೆ ಹಾಗೂ ಸಮಯಕ್ಕೆ ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿರುವುದು ವಿದ್ಯಾರ್ಥಿಗಳ ಹಾಜರಾತಿ ಮತ್ತು ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

ಸರ್ಕಾರ ಕೂಡಲೇ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಕೇಂದ್ರ ಸಮಿತಿ ಸದಸ್ಯೆ ಸುಜಾತ ವೈ, ಜಿಲ್ಲಾಧ್ಯಕ್ಷ ಸರ್ವೇಶ್ ಪಿ. ಮಾವಿನಕರ್, ರಾಜ್ಯ ಸಮಿತಿ ಸದಸ್ಯ ಇಮಾಮ್‌ಸಾಬ್ ನದಾಫ್, ಜಿಲ್ಲಾ ಸಮಿತಿ ಸದಸ್ಯ ಮಂಜುನಾಥ್, ಮುಖಂಡರಾದ ಬೃಂದಾ ಎಸ್. ಧನ್ನಿ, ತಾಯಣ್ಣ ಟೋಕಪೂರ್ ಪ್ರದೀಪ್ ಮ್ಯಾಗಡಿ, ಬಾಬಾಸಾಹೇಬ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ವೈಜ್ಞಾನಿಕ ಸಂಶೋಧನೆಗಳು ಆಧಾರವಾಗಲಿ: ಪ್ರೊ.ಬಟ್ಟು ಸತ್ಯನಾರಾಯಣ



ಕಲಬುರಗಿ,ಸೆ.18-

ಕಲ್ಯಾಣ ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆಗಳು ಆಧಾರವಾಗಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

79ನೇ ಕಲ್ಯಾಣ ಕರ್ನಾಟಕ ಉತ್ಸವದ ಅಂಗವಾಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1947ರ ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯ ದೊರೆತರೂ, ನಿಜಾಮರ ಆಡಳಿತದಲ್ಲಿದ್ದ ಈ ಪ್ರದೇಶವು 1948ರ ಸೆಪ್ಟೆಂಬರ್ 17ರಂದು ಭಾರತ ಒಕ್ಕೂಟಕ್ಕೆ ವಿಲೀನಗೊಂಡಿತು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಲ್ಲಿ ಸಿಯುಕೆ ಪ್ರಮುಖ ಪಾತ್ರ ವಹಿಸಬೇಕಿದ್ದು, ಈ ಭಾಗದ ಹಿಂದುಳಿಯುವಿಕೆಗೆ ಕಾರಣವಾಗಿರುವ ಅಂಶಗಳನ್ನು ಪ್ರಾಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ವೈಜ್ಞಾನಿಕವಾಗಿ ಅಧ್ಯಯನ ನಡೆಸಬೇಕು ಎಂದು ಕರೆ ನೀಡಿದರು.


ಸಂಶೋಧನೆಯ ಆಧಾರದ ಮೇಲೆ ಸಿದ್ಧವಾಗುವ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ಮೂಲಕ ಪರಿಣಾಮಕಾರಿ ನೀತಿ ರೂಪಣೆಗೆ ಕೊಡುಗೆ ನೀಡಬೇಕು. ವಿಶ್ವವಿದ್ಯಾಲಯದ ಸಂಶೋಧನಾ ಚಟುವಟಿಕೆಗಳು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವೇಗ ನೀಡುವಂತಾಗಬೇಕು ಎಂದು ಅವರು ತಿಳಿಸಿದರು.

ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ್ ಮಾತನಾಡಿ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ಅಪಾರ ನೈಸರ್ಗಿಕ ಸಂಪನ್ಮೂಲಗಳು ಮತ್ತು ಮಾನವ ಸಾಮರ್ಥ್ಯವನ್ನು ಹೊಂದಿವೆ. ಆ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಈ ಭಾಗದ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಪ್ರೊ.ಚನ್ನವೀರ ಆರ್.ಎಂ., ಡಾ. ಸಫಿಯಾ ಪರ್ವಿನ್, ಸಂಶೋಧನಾ ವಿದ್ಯಾರ್ಥಿ ಮಲ್ಲಿಕಾರ್ಜುನ ಹಾಗೂ ಛಾಯಾಚಿತ್ರಕಾರ ಶ್ರವಣ್ ಕುಮಾರ್ ಹಿರೇಮಠ ಮಾತನಾಡಿದರು.

ಕಾರ್ಯಕ್ರಮದ ಸಂಯೋಜಕರಾದ ಪ್ರೊ. ಪಾಂಡುರಂಗ ಪತ್ತಿ ಸ್ವಾಗತಿಸಿ, ವಂದನಾರ್ಪಣೆ ಸಲ್ಲಿಸಿದರು. ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಂದೇ ಮಾತರಂ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮ ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಂಡಿತು.

ತ್ಯಾಗ-ಬಲಿದಾನದಿಂದ ಕಲ್ಯಾಣ ಕರ್ನಾಟಕ ವಿಮೋಚನೆ ಸಾಧ್ಯವಾಗಿದೆ : ರವೀಂದ್ರ ಗಾಯಕವಾಡ್



ಬಸವಕಲ್ಯಾಣ,ಸೆ.18-

ಕಲ್ಯಾಣ ಕರ್ನಾಟಕ ಪ್ರದೇಶವು ಸಾವಿರಾರು ಜನರ ತ್ಯಾಗ ಮತ್ತು ಬಲಿದಾನದ ಫಲವಾಗಿ ವಿಮೋಚನೆ ಹೊಂದಿದ್ದು, ಆ ಹೋರಾಟಗಾರರ ಕನಸುಗಳನ್ನು ಸಾಕಾರಗೊಳಿಸಲು ನಾವೆಲ್ಲರೂ ಒಗ್ಗಟ್ಟಿನಿಂದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಬಸವ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರವೀಂದ್ರ ಗಾಯಕವಾಡ್ ಹೇಳಿದರು.

ನಗರದ ಬಸವ ಶಿಕ್ಷಣ ಸಂಸ್ಥೆಯ ಡಾ. ಬಿ.ಆರ್. ಅಂಬೇಡ್ಕರ್ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ನಡೆದ 79ನೇ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ವಿಮೋಚನೆಗಾಗಿ ಹೋರಾಡಿದ ಎಲ್ಲ ಮಹಾನ್ ತ್ಯಾಗಿಗಳು ಮತ್ತು ಹೋರಾಟಗಾರರಿಗೆ ಗೌರವ ಸಲ್ಲಿಸುವ ಮೂಲಕ ಅವರ ಆದರ್ಶಗಳನ್ನು ಮುಂದುವರಿಸಬೇಕಾಗಿದೆ ಎಂದು ಹೇಳಿದರು.

ಉಪನ್ಯಾಸಕ ಶ್ರೀಧರ್ ಛಲವಾದಿ ಮಾತನಾಡಿ, ಹೈದರಾಬಾದ್ ನಿಜಾಮ ಹಾಗೂ ರಜಾಕಾರರ ದಬ್ಬಾಳಿಕೆಯ

ಆಡಳಿತದಿಂದ ಜನರನ್ನು ಮುಕ್ತಿಗೊಳಿಸಲು ಅನೇಕ ದೇಶಪ್ರೇಮಿಗಳು ನಡೆಸಿದ ಹೋರಾಟದ ಫಲವೇ ಕಲ್ಯಾಣ ಕರ್ನಾಟಕ ವಿಮೋಚನೆ ಎಂದು ಹೇಳಿದರು.

ಉಪನ್ಯಾಸಕ ವಿಜಯಕುಮಾರ ರಾಯಪಳ್ಳಿ ಮಾತನಾಡಿ, ಅಂದಿನ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರು ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ದೃಢ ಸಂಕಲ್ಪ ಮತ್ತು ಪ್ರಯತ್ನದಿಂದ ಈ ಭಾಗ ಭಾರತ ಒಕ್ಕೂಟದಲ್ಲಿ ವಿಲೀನವಾಗಲು ಸಾಧ್ಯವಾಯಿತು ಎಂದು ತಿಳಿಸಿದರು.

ಪ್ರಾಂಶುಪಾಲ ಡಾ. ಜೈಶೇನಪ್ರಸಾದ್ ಮಾತನಾಡಿ, ತ್ಯಾಗ ಮತ್ತು ಬಲಿದಾನದ ಮೂಲಕ ಈ ಭಾಗವನ್ನು ವಿಮುಕ್ತಿಗೊಳಿಸಿದ ಹೋರಾಟಗಾರರಿಗೆ ಸಲ್ಲಿಸುವ ನಿಜವಾದ ಗೌರವವೆಂದರೆ ಕಲ್ಯಾಣ ಕರ್ನಾಟಕವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೋಟೆ, ಪಾಪನಾಶ ದೇವಸ್ಥಾನ ಅಭಿವೃದ್ಧಿಯಿಂದ ಜಿಲ್ಲೆಯ ಆರ್ಥಿಕತೆಗೆ ಉತ್ತೇಜನ: ಸಚಿವ ಈಶ್ವರ ಖಂಡ್ರೆ

ಬೀದರ್ ಸೆ.18-

ಪ್ರವಾಸೋದ್ಯಮ ಇಲಾಖೆಯ 'ಸ್ವದೇಶಿ ದರ್ಶನ್ 2.0' ಯೋಜನೆಯ 'ಚಾಲೆಂಜ್ ಬೇಸ್ಡ್ ಡೆಸ್ಟಿನೇಷನ್ ಡೆವಲಪ್‌ಮೆಂಟ್' ಅಡಿಯಲ್ಲಿ ?25 ಕೋಟಿ ವೆಚ್ಚದಲ್ಲಿ ನಗರದ ಐತಿಹಾಸಿಕ ಕೋಟೆ ಹಾಗೂ ಪಾಪನಾಶ ಕೆರೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಇದರಿಂದ ಜಿಲ್ಲೆಯ ಆರ್ಥಿಕತೆಗೆ ದೊಡ್ಡ ಮಟ್ಟದ ಉತ್ತೇಜನ ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಗುರುವಾರ ನಗರದ ಕೋಟೆ ಆವರಣದಲ್ಲಿ ಆಯೋಜಿಸಲಾಗಿದ್ದ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ, ಪ್ರವಾಸೋದ್ಯಮ ಇಲಾಖೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ ಇವರ ಸಂಯುಕ್ತಾಶ್ರಯದಲ್ಲಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ ಸ್ವದೇಶ ದರ್ಶನ 2.0 ಯೋಜನೆಯಡಿ ಬೀದರ ಕೋಟೆ ಮತ್ತು ಪಾಪನಾಶ ಕೆರೆ ಅಭಿವೃದ್ಧಿ ಕಾಮಗಾರಿಯ ಶಂಕುಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೀದರ್ ಕೋಟೆ ಹಾಗೂ ಪಾಪನಾಶ ದೇವಾಲಯಗಳು ಅಪಾರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಹೊಂದಿದ್ದು, ಈ ಪಾರಂಪರಿಕ ತಾಣಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವುದೇ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೋಟೆ ಅಭಿವೃದ್ಧಿಯಿಂದ ಹೊರರಾಜ್ಯಗಳ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದ್ದು, ಸ್ಥಳೀಯ ಯುವಕರಿಗೆ ಪ್ರವಾಸಿ ಮಾರ್ಗದರ್ಶಿ (ಗೈಡ್) ತರಬೇತಿ ನೀಡಿ ಉದ್ಯೋಗ ಕಲ್ಪಿಸಲಾಗುವುದು. ಜೊತೆಗೆ ಹೋಟೆಲ್, ಸಾರಿಗೆ ಹಾಗೂ ಸ್ಥಳೀಯ ವ್ಯಾಪಾರ-ವಹಿವಾಟು ವೃದ್ಧಿಸಿ ಜಿಲ್ಲೆ ಆರ್ಥಿಕವಾಗಿ ಸಬಲಗೊಳ್ಳಲಿದೆ ಎಂದರು.

ಲೋಕಸಭಾ ಸದಸ್ಯ ಸಾಗರ ಈ. ಖಂಡ್ರೆ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಪ್ರವಾಸಿ ತಾಣಗಳ ಮೂಲಸೌಕರ್ಯ ಮೇಲ್ದರ್ಜೆಗೇರಿಸಲು ಆದ್ಯತೆ ನೀಡಲಾಗುತ್ತಿದೆ. ಯೋಜನೆಯಡಿ ಕೋಟೆಯಲ್ಲಿ ಹಿರಿಯ ನಾಗರಿಕರಿಗೆ ಇವಿ ಬಗಿ ಶಟಲ್, ಹೆರಿಟೇಜ್ ವಾಕ್, ಪ್ರವಾಸಿ ಮಾಹಿತಿ ಕೇಂದ್ರ, ಆಕರ್ಷಕ ದೀಪಾಲಂಕಾರ, ಸೈಕಲ್ ಟ್ರ್ಯಾಕ್ ಹಾಗೂ ಫಾರೆಸ್ಟ್ ಟ್ರೇಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಅದೇ ರೀತಿ ಪಾಪನಾಶ ಕೆರೆ ಆವರಣದಲ್ಲಿ ಪ್ರವೇಶ ದ್ವಾರ, ಜಿಪ್‌ಲೈನ್, ರೋಪ್ ಕೋರ್ಸ್, ಬೋಟಿಂಗ್ ಜಟ್ಟಿ ಹಾಗೂ ಮಕ್ಕಳ ಆಟದ ಮೈದಾನ ನಿರ್ಮಿಸಲಾಗುವುದು. ಪ್ರವಾಸೋದ್ಯಮ ಉತ್ತೇಜನಕ್ಕಾಗಿ ವೆಬ್‌ಸೈಟ್ ಹಾಗೂ ಡಿಜಿಟಲ್ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬೀದರ ಉತ್ತರ ಕ್ಷೇತ್ರದ ಶಾಸಕ ರಹೀಂ ಖಾನ್ ಅವರು ಮಾತನಾಡಿ, ಬೀದರ್ ಕೋಟೆ ಹಾಗೂ ಚೌಖಂಡಿಯಂತಹ ಸ್ಮಾರಕಗಳಿಗೆ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಮರ್ಥ್ಯವಿದ್ದು, ಬಿಡುಗಡೆಯಾದ ಅನುದಾನವನ್ನು ಪರಿಣಾಮಕಾರಿಯಾಗಿ ಬಳಸಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಬೀದರ ದಕ್ಷಿಣ ಕ್ಷೇತ್ರದ ಶಾಸಕ ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಬೀದರ್ ಕೋಟೆ ಹಾಗೂ ಚೌಖಂಡಿಯಂತಹ ಸ್ಮಾರಕಗಳಿಗೆ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಮರ್ಥ್ಯವಿದ್ದು, ಬಿಡುಗಡೆಯಾದ ಅನುದಾನವನ್ನು ಪರಿಣಾಮಕಾರಿಯಾಗಿ ಬಳಸಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಮತ್ತೊಬ್ಬ ಶಾಸಕ ಶೈಲೇಂದ್ರ ಬೆಲ್ದಾಳೆ ಮಾತನಾಡಿ, 'ಪ್ರಸಾದ್-2' ಯೋಜನೆಯಡಿ ಪಾಪನಾಶ ದೇವಾಲಯ ಅಭಿವೃದ್ಧಿಗೆ ಅನುದಾನ ಸಿಕ್ಕಿದ್ದು, ಹೊನ್ನಿಕೇರಿ ಅರಣ್ಯ ಪ್ರದೇಶದಲ್ಲೂ ಇಕೋ ಟೂರಿಸಂಗೆ ಉತ್ತೇಜನ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವಿನೋದ್ ಅಪ್ಪೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿ.ಪಂ. ಸಿಇಒ ಗಿರೀಶ್ ಮಾಧವ್ ಗಿತ್ತೆ, ಸಹಾಯಕ ಆಯುಕ್ತ ಅಭಿನವ್ ಜೈನ್, ಮಹಾನಗರ ಪಾಲಿಕೆ ಸದಸ್ಯ ಇರ್ಶಾದ್ ಪೈಲ್ವಾನ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಬಡವರ, ರೈತರ, ಯುವಕರ, ಮಹಿಳೆಯರ ವಿರೋಧಿ ಸರ್ಕಾರ ರಾಜ್ಯದಲ್ಲಿದೆ: ಬಿ.ವೈ.ವಿಜಯೇಂದ್ರ

ನಿಮ್ಮ ತಂದೆ ಇದ್ದಾಗ ಸೊರಬದಲ್ಲಿ ನೀರಾವರಿ ಯೋಜನೆ ಮಾಡಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಮೂಗೂರು, ಕಚವಿ ಯೋಜನೆ ಮಾಡಿದ್ದೇವೆ. ದಂಡಾವತಿ ಯೋಜನೆ ಮಾಡಲು ಬಿಡಲಿಲ್ಲ. ಯಡಿಯೂರಪ್ಪ ಕಾರಿನ ಮೇಲೆ ಕಲ್ಲು ಹೊಡೆಸುವ ಕೆಲಸ ಮಾಡಿದ್ದೀಯಾ. ಯಡಿಯೂರಪ್ಪ ಭಾಗ್ಯಲಕ್ಷ್ಮಿ ಬಾಂಡ್ ನೀಡಿದ್ದಕ್ಕೆ ಜೇಮ್ಸ್ ಬಾಂಡ್ ಅಂತ ಹಾಸ್ಯ ಮಾಡಿದ್ದೀಯಾ ಎಂದರು.

ಪುಕ್ಸಟ್ಟೆ ಕೊಡ್ತು ಅಂತ ಪದೇ ಪದೆ ಹೇಳುತ್ತೀಯಾ. ಬಂಗಾರಪ್ಪ ಒಂದು ಬೋರ್‌ಗೆ 5 ಹೆಚ್ ಪಿ ವಿದ್ಯುತ್ ಮಾಡಿದ್ರು ಹಾಗಾದ್ರೆ ಯಡಿಯೂರಪ್ಪನವರು 10 ಹೆಚ್ ಪಿ ವಿದ್ಯುತ್ ನೀಡಲು ಮಾಡಿದರು. ವಿದ್ಯುತ್ ಕೊರತೆ ಇದ್ದಾಗ ಛತ್ತೀಸ್‌ಗಢದಿಂದ ವಿದ್ಯುತ್ ತರುವ ಯತ್ನ ಮಾಡಿದರು. ಆದರೆ 7 ತಾಸು ಅಂದ್ರು, 3 ತಾಸೂ ಕೊಡಲಿಲ್ಲ. ಈಗ 6 ತಾಸು ಅಂತ ಅಂದ್ರು, ಕನಿಷ್ಟ 2 ತಾಸೂ ವಿದ್ಯುತ್ ಇಲ್ಲ. ಶಕ್ತಿ ಯೋಜನೆಯು ಗ್ರಾಮೀಣ ಭಾಗದಲ್ಲಿ ಲಭಿಸುತ್ತಿಲ್ಲ ಎಂದು ದೂರಿದರು.

ಕಸ್ತೂರಿ ರಂಗನ್ ವರದಿಗೆ ಮೂರು ಉತ್ತರ ನೀಡಿದ್ದು, ಸಿದ್ದರಾಮಯ್ಯನವರು, ಯಡಿಯೂರಪ್ಪನವರು ಎರಡು ಬಾರಿ ಉತ್ತರ ನೀಡಿದ್ದು, ಇದರಲ್ಲಿ ನೋಟಿಫಿಕೇಷನ್ ಫಾರೆಸ್ಟ್ ಬಿಟ್ಟು ಬೇರೆ ಭೂಮಿ ಮುಟ್ಟುವಂತಿಲ್ಲ ಎಂದು ಉತ್ತರ ನೀಡಿದ್ದಾರೆ. ನನ್ನ ಕೆಲಸದ ಬಗ್ಗೆ ಮಾತನಾಡಲು ನಿಮಗೆ ಯೋಗ್ಯತೆ ಇಲ್ಲ ಎಂದು ಮಧು ಬಂಗಾರಪ್ಪ ವಿರುದ್ಧ ಕಿಡಿಕಾರಿದರು.

ಹಾಲಿನ ದರ ಏರಿಕೆ ಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ಆಗ್ರಹಿಸಿದರು. ಅಭಿವೃದ್ಧಿ ಅಂತ ಯಾರು ಬರಬೇಡಿ ಎಂದು ಕಾರ್ಯಕರ್ತರಿಗೆ ಕೈ ಮುಗಿದುಕೊಂಡರು. ಅಭಿವೃದ್ಧಿ ಹೆಸರಿಗೆ ಕೊಟ್ಟ ಹಣವನ್ನು ವಾಪಸ್ ಪಡೆದುಕೊಂಡಿದ್ದಾರೆ ಎಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಲಪ್ಪ ಹರತಾಳು ಮಾತನಾಡಿ, ಈಗಿನ ಸರ್ಕಾರ ರೈತರಿಗೆ ನೀರು, ವಿದ್ಯುತ್ ಕೊಡುತ್ತಿಲ್ಲ. ವಿದ್ಯುತ್ ಮಂತ್ರಿ ಬೆಂಗಳೂರಿನವರು ಅವರಿಗೆ ಗ್ರಾಮೀಣ ಭಾಗದ ಸಮಸ್ಯೆ ಗೊತ್ತಿಲ್ಲ. ಸರ್ಕಾರದವರು ಕೇವಲ ಘೋಷಣೆ ಮಾಡುತ್ತಿದ್ದಾರೆ. ಆದರೆ ಕೆಲಸ ಮಾಡುತ್ತಿಲ್ಲ. ಅವರು ಕೇವಲ ಬೆಂಗಳೂರಿನ ಸುತ್ತಮುತ್ತ ಆಡಳಿತ ಮಾಡುತ್ತಿದ್ದಾರೆ. ಅವರಿಗೆ ಅಲ್ಲಿ ಸರ್ಕಾರಕ್ಕೂ, ಅವರಿಗೂ ಆದಾಯ ಇದೆ. ಕೃಷ್ಣಬೈರೇಗೌಡ ಅವರ ಕೈಯಲ್ಲಿ ಸಿಎಂ ಒಂದು ಕೆಲಸ ಮಾಡಿಸುತ್ತಿದ್ದಾರೆ. ಖಾಲಿ ಸೈಟ್ ಕ್ಲೀನ್ ಮಾಡುವುದಕ್ಕೆ ಹೋಗಿ, ಅಲ್ಲಿ ಸೈಟ್ ಮಾಲೀಕರನ್ನು ಹುಡುಕಿಸಿ, ವಿದೇಶದಲ್ಲಿ ಇರುವವರ ಸೈಟ್‌ನಲ್ಲಿ ಬೇರೆಯವರನ್ನು ಟೆಂಟ್ ಹಾಕಿಸುವ ಹಾಗೂ ಮಾಲೀಕರನ್ನು ಕರೆಯಿಸಿ ರಾಜೀ ಮಾಡಿಸಿ ಸೈಟ್ ಒಡೆಯುವ ಕೆಲಸ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ವಿದ್ಯುತ್ ಸರಬರಾಜು ಮಾಡುವ ಅವಕಾಶ ಇದ್ದರೂ ಸಹ ಅದನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮಾಡುತ್ತಿಲ್ಲ. ಮಾತೆತ್ತಿದರೆ, ಅಪ್ಪ ಅಮ್ಮನ ಬಳಿಯೇ ಹೋಗುತ್ತಾರೆ. ಆಡಳಿತ ಮಾಡಲು ಅವರಿಗೆ ಬರುವುದಿಲ್ಲ. ಸಭೆ ನಡೆಸಿ, ವಿದ್ಯುತ್ ನೀಡಿ ಎಂದು ಸಿಎಂ, ವಿದ್ಯುತ್ ಮಂತ್ರಿಗಳ ಹೋಗಬೇಕು. ಆದ್ರೆ ಅದನ್ನು ಮಾಡುತ್ತಿಲ್ಲ ಎಂದರು.

ಕಸ್ತೂರಿ ರಂಗನ್ ವರದಿ ಕಾಂಗ್ರೆಸ್‌ನವರ ಪಾಪದ ಕೂಸು. ಹಿಂದೆ ಜಯರಾಮ್ ಅವರು ಕೇಂದ್ರದ ಮಂತ್ರಿಯಾದಾಗ ಗಾಡ್ಗಿಳ್ ವರದಿ ಬಂದಿತ್ತು. ನಂತರ ಅದನ್ನು ವಜಾ ಮಾಡಲಾಯಿತು. ನಂತರ ಕಸ್ತೂರಿ ರಂಗನ್ ವರದಿ ಬಂದಿತು. ಇದನ್ನು ಸ್ವಿಕಾರ ಮಾಡಿದ್ದು ಕಾಂಗ್ರೆಸ್ ಎಂದರು.

ತಾನು ಮಹಾನ್ ನಾಯಕ ಎಂದು ಮಧು ಹೇಳುತ್ತಾರೆ. ನಾಲ್ಕು ಬಾರಿ ಸೋತು, ಎರಡು ಬಾರಿ ಗೆದ್ದಿದ್ದಾರೆ. ಅಧಿಕಾರದಲ್ಲಿದ್ದು ಏನ್ ಮಾಡಿದ್ರು, ರಸ್ತೆ ಸರಿ ಮಾಡಿಸಿ ಮೊದಲು. 131 ಎಕರೆಯಲ್ಲಿ ಏನು ಮಾಡಿದ್ದೀರಾ? 5 ವರ್ಷ ಗುತ್ತಿಗೆಯನ್ನು ನೀಡಿದ್ದಾರೆ. ಜನರ ನಡುವೆ ಇರದೇ, ಹೋಗದೆ ಸುಮ್ಮನೆ ಯಾರೋ ಬರೆದುಕೊಟ್ಟ ಭಾಷಣ ಓದುವುದು ಅಲ್ಲ. ದೇವೇಗೌಡರ ಮಕ್ಕಳು, ಯಡಿಯೂರಪ್ಪನವರ ಮಕ್ಕಳು ಬೆಳೆಯುತ್ತಿದ್ದಾರೆ. ಅದೇ ರೀತಿ ಬಂಗಾರಪ್ಪನವರ ಮಕ್ಕಳು ಬೆಳೆಯಲಿ ಎಂದರು.

ಆದ್ರೆ ಹೀಗೆ ಮಾಡಿದ್ರೆ ಸರಿ ಇರುವುದಿಲ್ಲ. ಬಹುವಾರ್ಷಿಕ ಬೆಳೆಯನ್ನು ಉಳಿಸಿಕೊಳ್ಳಬೇಕಿದೆ. ದೆಹಲಿಗೆ ನರೇಂದ್ರ, ಬೆಂಗಳೂರಿಗೆ ವಿಜಯೇಂದ್ರ, ಶಿವಮೊಗ್ಗಕ್ಕೆ ರಾಘವೇಂದ್ರ. ಮುಂದಿನ ಬಾರಿ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದರು.

ಗೃಹರಕ್ಷಕ ದಳ ಕಚೇರಿಯಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ

ಕೋರಿ ಬಂದ ಅರ್ಜಿಗಳಲ್ಲಿ ವೈದ್ಯಕೀಯ ವೆಚ್ಚಗಳ ಅಡಿಯಲ್ಲಿ ಅರ್ಹರಾದ ಪ್ರವೀಣ್ ಕುಮಾರ್, ಗೃಹರಕ್ಷಕ ಮೆಟಲ ಸಂಖ್ಯೆ: 377 ಇವರ ಮಗನ ಹೃದಯದ ಶಸ್ತ ಚಿಕಿತ್ಸೆ ಸಂಬಧ 1,49,964 ರೂ. ಹಾಗೂ ಭವಾಂಜಿರಾವ್, ಪಿ.ಎಲ್.ಸಿ ಇವರ ಅಪಘಾತ ಚಿಕಿತ್ಸಾ ವೆಚ್ಚ ಸಂಬಧ 53,308 ರೂ. ಮತ್ತು ಉನ್ನತ ವ್ಯಾಸಂಗ ವೆಚ್ಚಗಳ ಅಡಿಯಲ್ಲಿ ಅರ್ಹರಾದ ತಿಮ್ಮನಗೌಡ, ಘಟಕಾಧಿಕಾರಿ ಇವರ ಮಗನ 1ನೇ ವರ್ಷದ ಎಂ.ಎಸ್.ಡಬ್ಲ್ಯೂ ಸಂಬಧ 14,000 ರೂ. ಗಳ ಮೊತ್ತದ ಚೆಕ್ಕನ್ನು ಕಾರ್ಯಕ್ರಮದಲ್ಲಿ ಜಿಲ್ಲಾ ಗೃಹರಕ್ಷಕದಳ ನಿಧಿಯಿಂದ ಪಾವತಿಸಲಾಯಿತು.

ಈ ವೇಳೆ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಾರುವ ನಿಟ್ಟಿನಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಯಿತು. ಗೃಹರಕ್ಷಕ ದಳದ ಕಚೇರಿ ಸಿಬ್ಬಂದಿ ಹಾಗೂ ಗೃಹರಕ್ಷಕದಳದ ಎಲ್ಲಾ ಸ್ವಯಂ ಸೇವಕ ಅಧಿಕಾರಿಗಳು ಮತ್ತು ಗೃಹರಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ತಮ್ಮ ಕೊಡುಗೆ ನೀಡಿದರು.

ಇದೇ ಜಿಲ್ಲಾ ಬೋಧಕರಾದ ಕಿಶೋರ್ ಅಮ್ಮನಭಾವಿ, ಎಫ್.ಡಿ.ಎ ಸರಸ್ವತಿ, ಎಸ್.ಡಿ.ಎ ದೇವಮ್ಮ, ವಾಹನ ಚಾಲಕರಾದ ಮಂಜುನಾಥ ದೇಸಾಯಿ, ಗೃಹ ರಕ್ಷಕದಳದ ಸ್ವಯಂ ಸೇವಕ ಅಧಿಕಾರಿಗಳಾದ ನಿಂಬನಗೌಡ, ಸೈಯದ್ ಜಾವೇದ್ ಪಾಷಾ, ವೀರಭದ್ರಪ್ಪ, ಹೆಚ್.ಮಲ್ಲಿಕಾರ್ಜುನ ಮತ್ತು ಎನ್.ಸಿ.ಓ ಬಸವಂತಸಿಗ್, ಹುಲಿಗೆಪ್ಪ ಸೇರಿದಂತೆ ಇತರರು ಇದ್ದರು.

ದೇವದುರ್ಗ ಕೆಬಿಜೆಎನ್‌ಎಲ್ ಚಿಕ್ಕಹೊನ್ನಕುಣಿ ಕಚೇರಿ ಸ್ಥಳಾಂತರ ಖಂಡಿಸಿ ಸೆ.28ರಂದು ಧರಣಿ ಸತ್ಯಾಗ್ರಹ : ಶಾಸಕಿ ಕರೆಮ್ಮ...

ಮಹಿಳೆಯಾಗಿ ಆಯ್ಕೆಯಾಗಿರುವ ಕಾರಣ ಸರ್ಕಾರ ದೇವದುರ್ಗ ತಾಲೂಕಿನ ವಿರುದ್ಧ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದ ಅವರು, ಈಗಾಗಲೇ ಎಸ್‌ಎಲ್‌ಓ ಕಚೇರಿ ಹಾಗೂ ಕಾರಾಗೃಹವನ್ನು ಸಹ ರಾಯಚೂರಿಗೆ ಸ್ಥಳಾಂತರಿಸಲಾಗಿದೆ. ತಾಲೂಕಿನ ಅಭಿವೃದ್ಧಿ ಕಾಮಗಾರಿಗಳು, ಅನುದಾನಗಳು ಹಾಗೂ ಯೋಜನೆಗಳ ಅನುಷ್ಠಾನಕ್ಕೂ ಅಡ್ಡಿಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ತಕ್ಷಣವೇ ಕಚೇರಿ ಸ್ಥಳಾಂತರ ಆದೇಶವನ್ನು ಹಿಂಪಡೆದು ರೈತರಿಗೆ ಅನುಕೂಲವಾಗುವಂತೆ ಯೋಜನೆಗಳನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ರೈತರೊಂದಿಗೆ ಸೇರಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಶಾಸಕಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಸನಗೌಡ ದೇಸಾಯಿ, ಅಮರೇಶ ಪಾಟೀಲ್ ಪರತಪುರ, ಚನ್ನಪ್ಪ, ಹನಮಂತರಾಯ ಚಿಂತಲಕುಂಟ, ಮಹಿಬೂಬಸಾಬ್, ರಮೇಶ್ ರಾಮನಾಳ, ಗೋವಿಂದರಾಜ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ಮಶಾನಕ್ಕೆ ಮೀಸಲಾದ 2 ಎಕರೆ ಜಮೀನಿನ ಹದ್ದಬಸ್ತು ಪೂರ್ಣ ಸಾರ್ವಜನಿಕರಿಗೆ ಅನುಕೂಲ

ಈ ಕುರಿತು ಕಂದಾಯ ದಾಖಲೆಗಳ ಆಧಾರದ ಮೇಲೆ ಸ್ಥಳ ಪರಿಶೀಲನೆ ನಡೆಸಿ, ಅತಿಕ್ರಮಣ ದೃಢಪಟ್ಟಲ್ಲಿ ಕಾನೂನುಬದ್ಧವಾಗಿ ಅತಿಕ್ರಮಣ ತೆರವುಗೊಳಿಸಿ, ಅಗತ್ಯವಿದ್ದಲ್ಲಿ ಕ್ರಿಮಿನಲ್ ಪ್ರಕರಣ ಸೇರಿದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ. ಅಲ್ಲದೆ, ಸರ್ಕಾರಿ ಜಮೀನಿನ ಸಂಪೂರ್ಣ ಹದ್ದುಬಸ್ತು ಮಾಡಿ ಶಾಶ್ವತ ಗಡಿಗುರುತುಗಳನ್ನು ಸ್ಥಾಪಿಸಿ, ಅಗತ್ಯವಿದ್ದಲ್ಲಿ ಬೇಲಿ ಅಳವಡಿಸಿ ಸಂರಕ್ಷಿಸಬೇಕೆಂದು ಮನವಿ ಮಾಡಲಾಗಿದೆ.

ಬಡವರು, ದೇವದಾಸಿ ಮಹಿಳೆಯರು ಮತ್ತು ಅಂಗವಿಕಲರಿಗೆ ನಿವೇಶನಕ್ಕೆ ಆಗ್ರಹ

ಗೌಡೂರು ಗ್ರಾಮ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನೇಕ ಬಡ ಮತ್ತು ವಸತಿರಹಿತ ಕುಟುಂಬಗಳು ವಸತಿ ಸೌಲಭ್ಯವಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಗ್ರಾಮದಲ್ಲಿ ಸುಮಾರು 25ರಿಂದ 30 ದೇವದಾಸಿ ಮಹಿಳೆಯರು, 30ರಿಂದ 40 ಅಂಗವಿಕಲರು ಸೇರಿದಂತೆ ಸುಮಾರು 100ರಿಂದ 150 ಅರ್ಹ ಬಡ ಹಾಗೂ ವಸತಿರಹಿತ ಕುಟುಂಬಗಳು ಇರುವ ಬಗ್ಗೆ ಮನವಿಯಲ್ಲಿ ತಿಳಿಸಲಾಗಿದೆ.

ಆದ್ದರಿಂದ, ಸರ್ಕಾರದ ಪ್ರಚಲಿತ ನಿಯಮಗಳು ಮತ್ತು ಅರ್ಹತಾ ಮಾನದಂಡಗಳಂತೆ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಲಭ್ಯವಿರುವ ಕಾನೂನುಬದ್ಧ ಸರ್ಕಾರಿ ಜಮೀನಿನಲ್ಲಿ ವಸತಿ ನಿವೇಶನ ಅಥವಾ ನಿಯಮಾನುಸಾರ ಭೂಮಿ ಮಂಜೂರು ಮಾಡುವ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಇದೇ ವೇಳೆ ಗೌಡೂರು ಗ್ರಾಮದ ಗೌಠಾಣ, ಗೋಮಾಳ ಹಾಗೂ ಇತರೆ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸ್ವಾಧೀನ, ಅಕ್ರಮ ನಮೂದು ಅಥವಾ ಖಾಸಗಿ ಬಳಕೆ ಕಂಡುಬಂದಲ್ಲಿ ಕಂದಾಯ ಮತ್ತು ಗ್ರಾಮ ಪಂಚಾಯಿತಿ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಹಶೀಲ್ದಾರರಿಗೆ ಕೃತಜ್ಞತೆ

ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ಸ್ಮಶಾನಕ್ಕಾಗಿ ಕಾಯ್ದಿರಿಸಿದ 2 ಎಕರೆ ಜಮೀನಿನ ಹದ್ದುಬಸ್ತು ಕಾರ್ಯವನ್ನು ತ್ವರಿತವಾಗಿ ಕೈಗೊಂಡ ಲಿಂಗಸುಗೂರು ತಹಶೀಲ್ದಾರರಿಗೆ ಗೌಡೂರು ಗ್ರಾಮದ ನಾಗರಿಕರು ಕೃತಜ್ಞತೆ ಸಲ್ಲಿಸಿದ್ದಾರೆ.

ಮುಂದೆಯೂ ಇದೇ ರೀತಿಯಾಗಿ ಸಾರ್ವಜನಿಕರ ಮನವಿಗಳಿಗೆ ಸ್ಪಂದಿಸಿ, ಸರ್ಕಾರಿ ಜಮೀನನ್ನು ಅತಿಕ್ರಮಣದಿಂದ ರಕ್ಷಿಸುವುದರ ಜೊತೆಗೆ ಅರ್ಹ ಬಡವರು ಹಾಗೂ ದುರ್ಬಲ ವರ್ಗದ ಜನರಿಗೆ ಸರ್ಕಾರದ ನಿಯಮಾನುಸಾರ ವಸತಿ ಸೌಲಭ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ವಿದ್ಯಾಸಾಗರ ವಿ. ನಾಯಕ, ತಾಲ್ಲೂಕು ವರದಿಗಾರರು ಹಾಗೂ ಗೌಡೂರು ಗ್ರಾಮದ ನಾಗರಿಕರಾದ ಶ್ರೀ ರುದ್ರಪ್ಪ ಚನ್ನವೀರಪ್ಪ ವಂದ್ಲಿ, ಯಮನಪ್ಪ, ಮದ್ದಪ್ಪ, ಬುಡ್ಡಪ್ಪ, ಬಸವರಾಜ ಸಿದ್ದಪ್ಪ, ಯಂಕಪ್ಪ, ಹನುಮಂತ, ಬಸವರಾಜ ಗುಂಡಪ್ಪ, ಯಲ್ಲಮ್ಮ ಹಂಪಮ್ಮ, ಪರಶುರಾಮ, ಸಣ್ಣ ಗುಂಡಪ್ಪ, ಲಕ್ಷ್ಮೀ, ದುರಗಪ್ಪ, ಶಂಕರಮ್ಮ, ಸಿದ್ದಪ್ಪ, ಗೀತಾ, ಶಿವಮ್ಮ, ರವಿ, ಮತಮ್ಮ, ದ್ಯಾಮಮ್ಮ, ನಿಂಗಮ್ಮ, ದುರುಗಮ್ಮ, ಶಾಂತಮ್ಮ, ಈರಮ್ಮ, ಹನುಮಮ್ಮ, ಗೌರಮ್ಮ, ಬಾಲಮ್ಮ ಸೇರಿದಂತೆ ಗ್ರಾಮಸ್ಥರು ಸೇರಿದಂತೆ ಅನೇಕರು ಇದ್ದರು.

ಕಲ್ಯಾಣ ಕರ್ನಾಟಕದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಬೇಕು : ಸಿಎಂ ಡಿ.ಕೆ.ಶಿವಕುಮಾರ್



ಕಲಬುರಗಿ,ಸೆ.18-

ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ವೇಗವನ್ನು ಕಲಬುರಗಿ ನಗರ ತೋರಿಸಿಕೊಡುತ್ತಿದ್ದು, ಅಭಿವೃದ್ಧಿಯಲ್ಲಿ ಬೆಂಗಳೂರಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ ಎಂಬುದನ್ನು ಕಲಬುರಗಿ ಸಾಬೀತುಪಡಿಸುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದಲ್ಲಿ ಆಯೋಜಿಸಿರುವ ವೈವಿಧ್ಯಮಯ ಸಾಂಸ್ಕೃತಿಕ, ಸಂಗೀತ, ನೃತ್ಯ ಹಾಗೂ ಮನರಂಜನಾ ಕಾರ್ಯಕ್ರಮಗಳ ಸ್ಟ್ರೀಟ್ ಫೆಸ್ಟಿವಲ್‌ಗೆ ಬುಧವಾರ ಸಂಜೆ ಚಾಲನೆ ನೀಡಿ, ಅಪ್ಪ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಕಲ್ಯಾಣ ಕರ್ನಾಟಕ ಯಾವ ರೀತಿಯಲ್ಲಿ ಅಭಿವೃದ್ಧಿಯಾಗುತ್ತಿದೆ ಎಂಬುದು ಈಗ ಎಲ್ಲರಿಗೂ ಗೋಚರಿಸುತ್ತಿದೆ. ಟೀಕೆ ಮಾಡುವುದಕ್ಕಿಂತ ನಗುನಗುತ್ತಾ ಈ ಸಂಭ್ರಮವನ್ನು ಆಚರಿಸಬೇಕು ಎಂಬುದು ನನ್ನ ಆಶಯ. ನಾವೆಲ್ಲರೂ ಒಟ್ಟಾಗಿ ಈ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಬೇಕು ಎಂಬ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇವೆ,'' ಎಂದು ಹೇಳಿದರು.

ಕಲಬುರಗಿಯಲ್ಲಿ ಶುದ್ಧ ಹಾಗೂ ಸುಂದರ ಪರಿಸರ ನಿರ್ಮಾಣವಾಗಿರುವುದನ್ನು ಶ್ಲಾಘಿಸಿದ ಅವರು, ಪುಟಾಣಿ ಮಕ್ಕಳು, ಹಿರಿಯರು ಹಾಗೂ ಮಹಿಳೆಯರು ಕಾರ್ಯಕ್ರಮವನ್ನು ನೋಡಿ ಸಂಭ್ರಮಿಸುತ್ತಿರುವುದು ಸಂತೋಷ ತಂದಿದೆ. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಕಲಬುರಗಿ ಜನತೆಗೆ ಅಭಿನಂದನೆಗಳು ಎಂದು ಹೇಳಿದರು.

ಕಲ್ಯಾಣ ಕರ್ನಾಟಕದ ಇತಿಹಾಸವೇ ಕರ್ನಾಟಕದ ಇತಿಹಾಸವಾಗಬೇಕು ಎಂಬುದು ತಮ್ಮ ಆಶಯವಾಗಿದೆ ಎಂದು ತಿಳಿಸಿದ ಡಿ.ಕೆ. ಶಿವಕುಮಾರ್, ಈ ಭಾಗದ ಅಭಿವೃದ್ಧಿಗೆ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆಯನ್ನು ಸ್ಮರಿಸಿದರು.

ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚಿನ ಅವಕಾಶಗಳು ದೊರೆಯುವಂತೆ ಮಾಡಲು ಮಲ್ಲಿಕಾರ್ಜುನ ಖರ್ಗೆ ಅವರ ಪಾತ್ರ ಮಹತ್ವದ್ದಾಗಿದೆ. ಈ ಭಾಗಕ್ಕೆ ಅವರು ನೀಡಿರುವ ಕೊಡುಗೆ ಅನನ್ಯವಾಗಿದೆ ಎಂದರು.

3ಡಿ ಲೈಟ್ ಶೋ, ಡ್ರೋನ್ ಶೋ ಆಕರ್ಷಣೆ :

ಉದ್ಘಾಟನಾ ಕಾರ್ಯಕ್ರಮದ ಬಳಿಕ ನಡೆದ 3ಡಿ ಲೈಟ್ ಶೋ ಹಾಗೂ ಡ್ರೋನ್ ಶೋ ಸಾರ್ವಜನಿಕರ ಗಮನ ಸೆಳೆಯಿತು. ವೈವಿಧ್ಯಮಯ ಸಾಂಸ್ಕೃತಿಕ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳೊಂದಿಗೆ ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಚಿವ ಡಾ.ಅಜಯ್ ಸಿಂಗ್, ತಿಪ್ಪಣ್ಣಪ್ಪ ಕಮಕನೂರ, ಅಲ್ಲಮಪ್ರಭು ಪಾಟೀಲ್, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ಶೇಖ್ ಅಜ್ಮಲ್ ಅಹಮದ್ ಗೋಳಾ, ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



371ಜೆ ಸಮರ್ಪಕ ಅನುಷ್ಠಾನಕ್ಕೆ ಕಟ್ಟುನಿಟ್ಟಿನ ಕ್ರಮಕ್ಕೆ ಆಗ್ರಹ

ಕಲಬುರಗಿ,ಸೆ.18-

ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಅಸಮತೋಲನ ನಿವಾರಣೆ ಹಾಗೂ ಸಂವಿಧಾನದ 371ಜೆ ವಿಶೇಷ ಸ್ಥಾನಮಾನದ ಸಮರ್ಪಕ ಅನುಷ್ಠಾನಕ್ಕಾಗಿ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವಂತೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಹೋರಾಟ ಸಮಿತಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಸಮಿತಿಯು ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಸುಮಾರು 30 ಸಾವಿರ ಶಿಕ್ಷಕರ ಹುದ್ದೆಗಳು ಸೇರಿದಂತೆ ವಿವಿಧ ಇಲಾಖೆಗಳ ಎಲ್ಲ ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು ಎಂದು ಒತ್ತಾಯಿಸಿದೆ.

371ಜೆ ನೇಮಕಾತಿ ಮತ್ತು ಬಡ್ತಿ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಪ್ರತ್ಯೇಕ ಆಡಳಿತಾತ್ಮಕ ನ್ಯಾಯಮಂಡಳಿ ಸ್ಥಾಪಿಸಿ, ಅದನ್ನು ಕಲಬುರಗಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಕೆಪಿಎಸ್‌ಸಿ ಮತ್ತು ಕೆಇಎ ಪ್ರಾದೇಶಿಕ ಕಚೇರಿಗಳನ್ನು ಕಲ್ಯಾಣ ಕರ್ನಾಟಕದಲ್ಲಿ ಸ್ಥಾಪಿಸುವುದು, ವಿಶ್ವವಿದ್ಯಾಲಯಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ 371ಜೆ ಅನುಷ್ಠಾನ ಪ್ರಾಧಿಕಾರ ರಚಿಸುವಂತೆ ಸಮಿತಿ ಆಗ್ರಹಿಸಿದೆ.

ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಕ್ರಮ ಕೈಗೊಳ್ಳುವುದು, ಕಲಬುರಗಿಯ ಪಿಎಂ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಕಾಮಗಾರಿಯನ್ನು ಶೀಘ್ರ ಆರಂಭಿಸುವುದು ಸೇರಿದಂತೆ ಹಲವು ಅಭಿವೃದ್ಧಿ ಬೇಡಿಕೆಗಳನ್ನೂ ಮುಂದಿಟ್ಟಿದೆ.

ಕೆಕೆಆರ್‌ಡಿಬಿ ಅನುದಾನದ ಪರಿಣಾಮಕಾರಿ ಬಳಕೆಗೆ 10 ವರ್ಷಗಳ ಕ್ರಿಯಾಯೋಜನೆ ರೂಪಿಸಬೇಕು. ಜೊತೆಗೆ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಿಸಿ ಆರೋಗ್ಯ ಸೇವೆಗಳನ್ನು ಬಲಪಡಿಸಬೇಕು ಎಂದು ಸಮಿತಿ ಮನವಿಯಲ್ಲಿ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ, ಗೌರವಾಧ್ಯಕ್ಷ ಸಿ.ಪನ್ನರಾಜ್, ಅಧ್ಯಕ್ಷ ಚಾಮರಸ ಮಾಲಿ ಪಾಟೀಲ, ಪ್ರಧಾನ ಕಾರ್ಯದರ್ಶಿ ಕೆ. ನೀಲಾ, ಜಿಲ್ಲಾಧ್ಯಕ್ಷೆ ಮೀನಾಕ್ಷಿ ಬಾಳಿ, ಹರವಿ ನಾಗನಗೌಡ, ಬಿ. ಬಸವರಾಜ, ಜಾನ್ ವೆಸ್ಲಿ, ಆರ್. ಬಸವರಾಜ, ನಾಗೇಂದ್ರ ಥಂಬೆ, ಪಿಡ್ಡಪ್ಪ ಜಾಲಗಾರ, ಅರ್ಜುನ್ ಭದ್ರೆ, ಮಲ್ಲಿಕಾರ್ಜುನ ಸತ್ಯಂಪೇಟೆ, ಪಂಡಿತರಾವ್ ಚಿದ್ರಿ, ಮಲ್ಲಿಕಾರ್ಜುನ ರೆಡ್ಡಿ, ಮರೆಪ್ಪ ಹಳ್ಳಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳು ಎದುರಿಸಲು ಸಿದ್ಧರಾಗಿರಿ- ಅಪರ ಜಿಲ್ಲಾಧಿಕಾರಿ ಸುರೇಖಾ

ಬೀದರ, ಸೆ.18-

ಕಲ್ಯಾಣ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಸತತ ಅಧ್ಯಯನ ಮಾಡುವುದರ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳು ಎದುರಿಸಲು ಸಿದ್ಧರಾಗಿರಿ ಎಂದು ಅಪರ ಜಿಲ್ಲಾಧಿಕಾರಿ ಸುರೇಖಾ ಅವರು ಹೇಳಿದರು.

ಗುರುವಾರ ಜಿಲ್ಲಾಡಳಿತ, ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ ಹಾಗೂ ಕರ್ನಾಟಕ ಸಾಹಿತ್ಯ ಸಂಘದ ಸಹಯೋಗದಲ್ಲಿ ಶ್ರೀ ಎವಿಸ್‌ಆರ್ ಸಭಾಂಗಣದಲ್ಲಿ ಆಯೋಜಿಸಿದ ಕಲ್ಯಾಣ ಕರ್ನಾಟಕದ ಉತ್ಸವ ಪ್ರಯುಕ್ತ ನಡೆದ ರಾಷ್ಟ್ರೀಯ ಭಾವೈಕ್ಯತೆ ಬಹುಭಾಷಾ ಕವಿಗೋಷ್ಠಿ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ಹಿಂದುಳಿದ ಪ್ರದೇಶ ಹಣೆಪಟ್ಟಿ ಅಳಿಸಲು ನಾವೆಲ್ಲರೂ ಶ್ರಮಪಡಬೇಕು. ಶರಣ, ಪರಂಪರೆಯ ಪುಣ್ಯ ಭೂಮಿ ಇದಾಗಿದೆ. ಕಾಯಕವೇ ಕೈಲಾಸ ಸಾರಿದ ಅಣ್ಣ ಬಸವಣ್ಣನ ಕನಸು ನನಸಾಗಬೇಕಾದರೆ ಈ ಪ್ರದೇಶದ ಎಲ್ಲಾರೂ ಪ್ರತಿಯೊಂದು ಕ್ಷೇತ್ರದಲ್ಲಿ ಶ್ರಮಿಸಬೇಕು. ಆಗ ಹಿಂದುಳಿದ ಹಣೆಪಟ್ಟಿ ಅಳಿಸಲು ಸಾಧ್ಯ ಎಂದರು.

ಪೋಲಿಸ್ ಅಧಿಕಾರಿಯಾಗಿದ್ದ ನಾನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ವಿವಿಧ ಹುದ್ದೆಗಳನ್ನು ನಿರ್ವಹಿಸಿ ಇಂದು ಅಪರ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುವ ಸೌಭಾಗ್ಯ ನನಗೆ ದೊರೆತಿದೆ. ನಮ್ಮೆಲ್ಲರ ಗುರಿಗಳು ವಿಶಾಲವಾಗಿರಬೇಕು. ಆಧುನಿಕ ಜಗತ್ತಿನ ಜ್ಞಾನ ಸಂಪಾದನೆ ಮಾಡುವುದರ ಮೂಲಕ ಹೆಚ್ಚೆಚ್ಚು ಅಧ್ಯಯನ ಮಾಡಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಉತ್ತಮ ಅಂಕಗಳು ಪಡೆದು ಉನ್ನತ ಹುದ್ದೆಗಳು ಪಡೆದು ಜನಸೇವೆ ಮಾಡುವುದರ ಮುಖಾಂತರ ತಮ್ಮ ತಮ್ಮ ಬದುಕು ಕಟ್ಟಿಕೊಳ್ಳಬಹುದೆಂದು ಅಭಿಪ್ರಾಯ ಪಟ್ಟರು.



ರಾಜ್ಯಸಭೆ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆ, ದಿ. ಧರ್ಮಸಿಂಗ್, ಲೋಕನಾಯಕ ಡಾ. ಭೀಮಣ್ಣಾ ಖಂಡ್ರೆ, ಆರ್. ವಿ. ಬಿಡಪ್, ವೈಜಿನಾಥ ಪಾಟೀಲ ಮುಂತಾದವರು ಹಾಗೂ ಹೈದ್ರಾಬಾದ ಕರ್ನಾಟಕ ಹೋರಾಟದ ಶ್ರಮದಿಂದ ಕಲಂ 371 (ಜೆ) ಪಡೆದುಕೊಳ್ಳಲು ಸಾಧ್ಯವಾಯಿತು.

ಈ ಭಾಗದ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ದುಡಿದ ಮಹನೀಯರ ಬಗ್ಗೆ ಸ್ಮರಣೆ ಅಗತ್ಯ ಎಂದು ಹೈದ್ರಾಬಾದ ಕರ್ನಾಟಕ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಅನಿಲ್ ಬೆಲ್ದಾರ ಅವರು ವಿಶೇಷ ಉಪನ್ಯಾಸ ನೀಡಿದರು.

ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘದ ಅಧ್ಯಕ್ಷರಾದ ಪ್ರೊ. ಡಾ. ಜಗನ್ನಾಥ ಹೆಬ್ಬಾಳೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತಿ ವಸ್ತ್ರದ, ಪುಣ್ಯವತಿ ವಿಸಾಜಿ, ವಜ್ರಾ ಪಾಟೀಲ, ಪಾರ್ವತಿ ಸೋನಾರೆ, ಡಾ. ಸಾವಿತ್ರಿ ಹೆಬ್ಬಾಳೆ, ಜಯಶ್ರೀ ಸುಕಾಲೆ, ಪುಷ್ಪ ಕನಕ, ಸುನಿತಾ ದಾಡಗೆ, ಚನ್ನಮ್ಮ ವಲ್ಲೇಪೂರೆ, ಸಾರಿಕಾ ಗಂಗಾ, ಶಾಂತಮ್ಮ ಬಲ್ಲೂರ, ಎಸ್.ಬಿ. ಕುಚಬಾಳ, ದೇವೇಂದ್ರ ಬರಗಾಲೆ, ಡಾ. ಮಂಜು ಮಾಲೇಕರ್, ಮಾರುತಿ ಭೀಮಣ್ಣ, ಸುನಿಲ ಆಡೆ, ಅಮೂಲ್ಯ ಎಸ್, ಚಂದ್ರಶೇಖರ ಸಿಂಧೆ, ಸರಿತಾ ಸಿಂಧೆ, ಸಯೀದ್ ಅಬ್ದುಲ್ ಲತೀಫ್ ಖಲೀಷಾ, ಡಾ. ಮುಸ್ತಾಖೀಮ್ ಬೇಗಂ, ಅಮೀರ ಉದ್ದಿನ್ ಅಮೀರ, ಹಮೀದ ಸಲೀಮ ಹಮೀದ್, ಅಮೀನ್ ನವಾಜ, ಯುಸೂಫ ರಹೀಂ, ಡಾ. ಪಾಟೀಲ್ ಶಶಿಕಾಂತ, ಡಾ. ಅರ್ಷಾ ಜಬೀನ್, ಡಾ. ಕೃಷ್ಣಾವೇಣಿ ಬಿ, ಡಾ. ಅಚಿಜಲಿ ಉಲ್ಲೇ ಮುಂತಾದ ಕವಿಗಳು ರಾಷ್ಟ್ರೀಯ ಭಾವೈಕ್ಯತೆ ಕುರಿತು ಕವನ ವಾಚನ ಮಾಡಿದರು.

ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಡಾ. ರಾಜಕುಮಾರ ಹೆಬ್ಬಾಳೆ ಸ್ವಾಗತಿಸಿದರು. ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯದರ್ಶಿ ಡಾ. ಸುನಿತಾ ಕೂಡ್ಲಿಕರ್ ಕಾರ್ಯಕ್ರಮ ನಿರೂಪಿಸಿದರು. ಕರ್ನಾಟಕ ಸಾಹಿತ್ಯ ಸಂಘ ಟ್ರಸ್ಟ ಅಧ್ಯಕ್ಷರಾದ ಶಂಕರರಾವ ಹೊನ್ನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ಸಾಹಿತ್ಯ ಸಂಘ ಪ್ರಧಾನ ಕಾರ್ಯದರ್ಶಿ ನಿಜಲಿಂಗಪ್ಪ ತಗಾರೆ ವಂದಿಸಿದರು.


ಶಾಸಕ ಡಾ.ಸಿದ್ದು ಪಾಟೀಲ್ ನೇತೃತ್ವದಲ್ಲಿ ಬಿಎಸ್‌ಎಸ್‌ಕೆ ಬಚಾವ್ ಪಾದಯಾತ್ರೆ

ಹುಮನಾಬಾದ್,ಸೆ.18-

ಸಾಲದ ಸುಳಿಯಲ್ಲಿ ಸಿಲುಕಿ ಸ್ಥಗಿತಗೊಂಡಿರುವ ಹಳ್ಳಿಖೇಡ್ (ಬಿ) ಬಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸುವಂತೆ ಒತ್ತಾಯಿಸಿ ಶಾಸಕ ಡಾ.ಸಿದ್ದು ಪಾಟೀಲ್ ನೇತೃತ್ವದಲ್ಲಿ ನಗರದಿಂದ ಕಾರ್ಖಾನೆವರೆಗೆ ಬಿಎಸ್‌ಎಸ್‌ಕೆ ಬಚಾವ್ ಪಾದಯಾತ್ರೆ ಬುಧವಾರ ನಡೆಯಿತು. ನಗರದ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾದ ಪಾದಯಾತ್ರೆ ಸುಮಾರು 35 ಕಿ.ಮೀ. ಸಂಚರಿಸಿ ಸಂಜೆ ಬಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ತಲುಪಿತು. ಪಾದಯಾತ್ರೆಯಲ್ಲಿ ರೈತರು, ಬಿಜೆಪಿ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ.ಸಿದ್ದು ಪಾಟೀಲ್, ರೈತರು ತೋರಿದ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿ, ''ರೈತರು ನನಗೆ ಆಶೀರ್ವಾದ ನೀಡಿದರೆ ಬಿಎಸ್‌ಎಸ್‌ಕೆ ಕಾರ್ಖಾನೆಯನ್ನು ಪುನರಾರಂಭ ಮಾಡಿಸುತ್ತೇನೆ'' ಎಂದು ಹೇಳಿದರು.

ಬಿಎಸ್‌ಎಸ್‌ಕೆ ಕಾರ್ಖಾನೆ ಮತ್ತು ರೈತರ ಸಂಬಂಧ ತಾಯಿಮಗನ ಬಾಂಧವ್ಯದಂತಿದೆ. ಕಾರ್ಖಾನೆಯನ್ನು ಲೀಸ್‌ಗೆ ನೀಡಿ ಪುನರಾರಂಭಿಸಬೇಕು. ಅಗತ್ಯವಿದ್ದರೆ ವಿಧಾನಸೌಧದ ಒಳಗೂ ಹೊರಗೂ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲಬುರಗಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಖಾನೆ ಸಮಸ್ಯೆಯ ಬಗ್ಗೆ ಅವರ ಗಮನಕ್ಕೂ ತರುವುದಾಗಿ ಹೇಳಿದರು.

ಕಾರ್ಖಾನೆಯ ಸ್ಥಾಪನೆ ಕುರಿತು ಮಾತನಾಡಿದ ಶಾಸಕ ಸಿದ್ದು ಪಾಟೀಲ್, ಭೀಮಣ್ಣ ಖಂಡ್ರೆ ಹಾಗೂ ಗುರುಬಸಪ್ಪ ಖೇಣಿ ಹೆಸರುಗಳನ್ನು ಉಲ್ಲೇಖಿಸಿ, ಕಾರ್ಖಾನೆಯನ್ನು ಮಾರಾಟ ಮಾಡುವ ಯಾವುದೇ ಪ್ರಯತ್ನಕ್ಕೆ ವಿರೋಧ ವ್ಯಕ್ತಪಡಿಸಿದರು.

ಮಾಜಿ ಕೇಂದ್ರ ಸಚಿವ ಭಗವಂತ್ ಖೂಬಾ ಮಾತನಾಡಿ, ಕಾರ್ಖಾನೆಯನ್ನು ಲೀಸ್‌ಗೆ ನೀಡದಿದ್ದರೆ ಡಿಸಿಸಿ ಬ್ಯಾಂಕ್ ಆಡಳಿತದ ವಿರುದ್ಧವೂ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪಾದಯಾತ್ರೆಯಲ್ಲಿ ಶಾಸಕ ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಸದಸ್ಯ ಎಂ.ಜಿ. ಮೂಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್, ಈಶ್ವರ್ ಸಿಂಗ್ ಠಾಕೂರ್ ಸೇರಿದಂತೆ ಅನೇಕ ಮುಖಂಡರು ಹಾಗೂ ರೈತರು ಭಾಗವಹಿಸಿದ್ದರು.

ಬೆಂಬಲ ವಾಪಸ್ ಪಡೆದ ಆಮ್ ಆದ್ಮಿ ಪಕ್ಷ: ಕೆಲವು ದಿನಗಳ ಹಿಂದೆ ಈ ಪಾದಯಾತ್ರೆ ಪಕ್ಷಾತೀತ ಹೋರಾಟವಾಗಿರುತ್ತದೆ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಘೋಷಿಸಿದ್ದರು. ಇದಕ್ಕೆ ಬೆಂಬಲ ಸೂಚಿಸಿದ್ದ ಆಮ್ ಆದ್ಮಿ ಪಕ್ಷದ ಮುಖಂಡ ಬ್ಯಾಂಕ್ ರೆಡ್ಡಿ ಹಾಗೂ ಜನರ ಧ್ವನಿ ಸಂಘಟನೆಯ ರಾಜ್ಯಾಧ್ಯಕ್ಷ ಅಂಕುಶ್ ಗೋಖಲೆ ಹೋರಾಟದಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದರು. ಆದರೆ ಪಾದಯಾತ್ರೆಯಲ್ಲಿ ಬಿಜೆಪಿ ಧ್ವಜಗಳು ಪ್ರಮುಖವಾಗಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಇದು ಪಕ್ಷಾತೀತ ಹೋರಾಟವಲ್ಲ ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷ ತನ್ನ ಬೆಂಬಲವನ್ನು ವಾಪಸ್ ಪಡೆದುಕೊಂಡಿತು. ಪಕ್ಷಾತೀತ ಹೋರಾಟ ಎಂದು ಹೇಳಿ ನಂತರ ಬಿಜೆಪಿ ಧ್ವಜಗಳನ್ನು ಮುನ್ನೆಲೆಗೆ ತಂದಿದ್ದಾರೆ. ಕೊಟ್ಟ ಮಾತಿನಂತೆ ನಡೆದು ಕೊಳ್ಳಲಿಲ್ಲ. ಈ ಹೋರಾಟದಿಂದ ದೂರ ಉಳಿದಿದ್ದೇವೆ. ಮುಂದಿನ ದಿನಗಳಲ್ಲಿ ಪತ್ರಿಕಾಗೋಷ್ಠಿ ನಡೆಸಿ ನಮ್ಮ ನಿಲುವು ತಿಳಿಸುತ್ತೇವೆ. -ಬ್ಯಾಂಕ್ ರೆಡ್ಡಿ, ಆಮ್ ಆದ್ಮಿ ಪಕ್ಷದ ಮುಖಂಡ

ನಿಮ್ಮೂರು ಸುದ್ದಿ

ಸಂಪಾದಕೀಯ



ಯಾರು ದೇಶದ್ರೋಹಿಗಳು? ಮೋದಿ ಭಾರತದ ಹೊಸ ನಿರೂಪಣೆ ಅಪಾಯಕಾರಿ

ಮೋದಿ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯೇತರ ಪಕ್ಷಗಳ ಮುಖಂಡರನ್ನು, ಬಿಜೆಪಿ ವಿರೋಧಿಗಳನ್ನು, ಪ್ರಗತಿಪರ ಚಿಂತಕರನ್ನು, ಸರ್ಕಾರದ ನೀತಿಗಳ ವಿರುದ್ಧ ಧ್ವನಿ ಎತ್ತಿದ ಸಾಮಾನ್ಯ ಜನರನ್ನು, ಮಹಿಳಾಪರ ಹೋರಾಟಗಾರರನ್ನು ದೇಶದ್ರೋಹಿಗಳು ಎಂದು ಕರೆಯಲಾಗುತ್ತದೆ. ಮುಸ್ಲಿಮರೆಲ್ಲರನ್ನೂ ಸಾರಾಸಗಟಾಗಿ ದೇಶದ್ರೋಹಿಗಳು, ಪಾಕಿಸ್ತಾನ ಬೆಂಬಲಿಗರು, ಭಯೋತ್ಪಾದಕರು ಎಂದು ನಿಂದಿಸಲಾಗುತ್ತಿದೆ. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ಪಕ್ಷ ಬಿಜೆಪಿಯವರ ಪ್ರಕಾರ ದೇಶದ್ರೋಹಿಗಳನ್ನು ಬೆಂಬಲಿಸುವ ಪಕ್ಷ!

''ಉಮರ್ ಖಾಲಿದ್ ರಾಷ್ಟ್ರೀಯವಾದಿ, ಗಾಂಧಿ ಹಂತಕ ಗೋಡ್ಸೆ ಸಹಚರ ಸಾವರ್ಕರ್ ಬೆಂಬಲಿಗರು ದೇಶದ್ರೋಹಿಗಳು'' ಎಂದು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಬಿ ಕೆ ಹರಿಪ್ರಸಾದ್ ಹೇಳಿಕೆಯ ವಿರುದ್ಧ ಸಂಘಪರಿವಾರ ಆಕ್ರೋಶ ಹೊರ ಹಾಕಿದೆ, ಪೊಲೀಸರಿಗೆ ದೂರು ನೀಡಿದೆ. ಅದರ ಬೆನ್ನಲ್ಲೇ ದೆಹಲಿಯ ವಿದ್ಯಾರ್ಥಿ ಪ್ರತಿಭಟನೆಯಲ್ಲಿ ವ್ಯಕ್ತಿಯೋರ್ವರ ತಲೆ ಒಡೆದಿದ್ದ ಮೋದಿ ಅಭಿಮಾನಿ ಸ್ವತಂತ್ರ ಭಾರದ್ವಾಜ್‌ಗೆ ಹದಿನಾಲ್ಕು ದಿನಗಳ ಪೊಲೀಸ್ ಕಸ್ಟಡಿಯ ನಂತರ ದೆಹಲಿ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವಿರೋಧಕ್ಕೆ ಕಾರಣವಾಗಿದೆ. ವ್ಯಕ್ತಿಯೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದು ನಾನೇ ಎಂದು ಸ್ವಯಂ ಹೇಳಿಕೆ ಕೊಟ್ಟ ಆರೋಪಿಗೆ ಜಾಮೀನು ನೀಡಿ, ಆರು ವರ್ಷಗಳಿಂದ ಯಾವುದೇ ವಿಚಾರಣೆ ನಡೆಸದೇ ಜೈಲಿನಲ್ಲಿರುವ ವಿದ್ಯಾರ್ಥಿ ಮುಖಂಡ ಉಮರ್ ಖಾಲಿದ್‌ಗೆ ಜಾಮೀನು ನಿರಾಕರಣೆ ಮಾಡಿರುವ ಕೋರ್ಟ್‌ನ ಪಕ್ಷಪಾತಿ ಧೋರಣೆ ಭಾರೀ ಟೀಕೆಗೆ ಒಳಗಾಗಿದೆ.

ದೆಹಲಿಯ ಪ್ರತಿಷ್ಠಿತ ಜೆಎನ್‌ಯುನ ಪ್ರತಿಭಾವಂತ ವಿದ್ಯಾರ್ಥಿ ಉಮರ್ ಖಾಲಿದ್ ವಿದ್ಯಾರ್ಥಿ ಮುಖಂಡರಾಗಿ, ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟದ ಮುಂಚೂಣಿ ನಾಯಕರಾಗಿದ್ದರು. 2020ರಲ್ಲಿ ಮೋದಿ ಸರ್ಕಾರ ಮುಸ್ಲಿಂ ತುಷ್ಟೀಕರಣದ ನೀತಿಯಾಗಿ ಎನ್‌ಆರ್‌ಸಿ ಜಾರಿಗೊಳಿಸಲು ಹೊರಟಾಗ ಸಹಜವಾಗಿಯೇ ದೇಶಾದ್ಯಂತ ಭಾರೀ ಪ್ರತಿಭಟನೆಗಳು ನಡೆದಿವೆ. ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವು ವಿದ್ಯಾರ್ಥಿ ಮುಖಂಡರು ನೇತೃತ್ವ ವಹಿಸಿದ್ದರು. ಈ ಪ್ರತಿಭಟನೆಯನ್ನು ಕೆಡಿಸಲು, ಗಲಭೆ ಸೃಷ್ಟಿಸಲು ನೇರವಾಗಿ ಸಂಘಪರಿವಾರದ ಬೆಂಬಲಿಗರು ಪ್ರತಿಭಟನೆಯ ಒಳಗೆ ನುಗ್ಗಿದ್ದರು. ಸಂಘಿ ಯುವಕನೊಬ್ಬ ಶಾಹೀನ್‌ಬಾಗ್ ಪ್ರತಿಭಟನೆಯ ಸ್ಥಳದಲ್ಲಿ ಪಿಸ್ತೂಲು ತೋರಿಸಿ ಗುಂಡಿಕ್ಕುವ ಬೆದರಿಕೆಯೊಡ್ಡಿದ್ದ. ನೂರಾರು ಪೊಲೀಸರು ಆತನನ್ನು ಬಂಧಿಸದೇ ನಿಂತು ನೋಡುತ್ತಿದ್ದ ದೃಶ್ಯಗಳನ್ನು ದೇಶವೇ ನೋಡಿದೆ. ಅಂತಹ ಕ್ರಿಮಿನಲ್‌ಗಳನ್ನು ಸಮಾಜದಲ್ಲಿ ಆರಾಮವಾಗಿ ಇರಲು ಬಿಟ್ಟು ಉಮರ್ ಖಾಲೀದ್, ಶಾರ್ಜೀಲ್ ಇಮಾಮ್ ತರಹದ ಯುವ ನಾಯಕರನ್ನು ದೇಶದ್ರೋಹದ ಪ್ರಕರಣದಡಿ ಬಂಧಿಸಲಾಗಿದೆ. ಇವರ ಜೊತೆಗೆ ಬಂಧಿತರಾಗಿದ್ದ ಇನ್ನೂ ನಾಲ್ಕು ಮಂದಿಗೆ ಕಳೆದ ವರ್ಷ ಜಾಮೀನು ನೀಡಲಾಗಿದೆ.

ದೇಶದ್ರೋಹಿಗಳೆಂದರೆ ಯಾರು? ಈ ಪದ ಎರಡು ದಶಕಗಳ ಹಿಂದಿನವರೆಗೂ ಅಪರೂಪವಾಗಿ ಕೇಳಿಬರುತ್ತಿತ್ತು. ಭಯೋತ್ಪಾದಕರ ಜೊತೆಗೆ ನಂಟು ಹೊಂದಿದವರು, ಅವರಿಗೆ ನೆರವು ನೀಡಿದವರು, ದೇಶದ ಭದ್ರತೆಗೆ ಸಂಬಂಧಿಸಿದ ಮಾಹಿತಿಗಳನ್ನು ವಿರೋಧಿ ರಾಷ್ಟ್ರಗಳಿಗೆ ನೀಡುವವರು ಹೀಗೆ ಗಂಭೀರ ದೇಶವಿರೋಧಿ ಕೃತ್ಯಗಳಲ್ಲಿ ಭಾಗಿಯಾದವರನ್ನು ದೇಶದ್ರೋಹಿಗಳು ಎಂದು ಕರೆಯಲಾಗುತ್ತಿತ್ತು. ಕಾನೂನಾತ್ಮಕವಾಗಿ ಕೋರ್ಟ್ ಆರೋಪಿಯ ಕೃತ್ಯಕ್ಕೆ ಪೂರಕ ಸಾಕ್ಷ್ಯಾಧಾರ ಪರಿಶೀಲಿಸಿ ಅದು ಸಾಬೀತಾದ ನಂತರ ದೇಶದ್ರೋಹಿ ಎಂದು ಘೋಷಣೆ ಮಾಡಿ ಆತನಿಗೆ ಶಿಕ್ಷೆ ವಿಧಿಸಬೇಕು. ಆದರೆ, ಮೋದಿ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯೇತರ ಪಕ್ಷಗಳ ಮುಖಂಡರನ್ನು, ಬಿಜೆಪಿ ವಿರೋಧಿಗಳನ್ನು, ಪ್ರಗತಿಪರ ಚಿಂತಕರನ್ನು, ಸರ್ಕಾರದ ನೀತಿಗಳ ವಿರುದ್ಧ ಧ್ವನಿ ಎತ್ತಿದ ಸಾಮಾನ್ಯ ಜನರನ್ನು, ಮಹಿಳಾಪರ ಹೋರಾಟಗಾರರನ್ನು ದೇಶದ್ರೋಹಿಗಳು ಎಂದು ಕರೆಯಲಾಗುತ್ತಿದೆ. ಮುಸ್ಲಿಮರೆಲ್ಲರನ್ನೂ ಸಾರಾಸಗಟಾಗಿ ದೇಶದ್ರೋಹಿಗಳು, ಪಾಕಿಸ್ತಾನ ಬೆಂಬಲಿಗರು, ಭಯೋತ್ಪಾದಕರು ಎಂದು ನಿಂದಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲಿಮರನ್ನು ದೇಶದ್ರೋಹಿಗಳು ಎಂದು ಬಿಂಬಿಸಲು ತಿರುಚಿದ ಆಡಿಯೋ, ವಿಡಿಯೋಗಳನ್ನು ಹರಿಯಬಿಡಲಾಗುತ್ತಿದೆ. ಮುಸ್ಲಿಮರೆಂದರೆ ಅಪಾಯಕಾರಿ ಜನ, ಬಾಂಬ್ ಹಾಕುವವರು ಎಂದು ಹಿಂದುತ್ವದ ಮದ ಏರಿಸಿಕೊಂಡವರು ಸಾರ್ವಜನಿಕವಾಗಿ ಅವಮಾನಿಸುತ್ತಿದ್ದಾರೆ. ಜನಪರ ಹೋರಾಟಗಳಲ್ಲಿ ಭಾಗಿಯಾದ ಸಾಮಾನ್ಯ ಮುಸಲ್ಮಾನರನ್ನೂ ಗುರಿಯಾಗಿಸಿ ಇಲ್ಲ ಸಲ್ಲದ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ ವರ್ಷಗಳ ಕಾಲ ವಿಚಾರಣೆಯನ್ನೇ ನಡೆಸದೇ ಬಂಧಿಸಿಡಲಾಗುತ್ತಿದೆ. ಇಂತಹ ಹಲವು ಪ್ರಕರಣಗಳಲ್ಲಿ ಆರೋಪ ಸಾಬೀತಾಗದೇ ಬಿಡುಗಡೆಗೊಂಡ ಹತ್ತಾರು ಪ್ರಕರಣಗಳು ನಮ್ಮ ಕಣ್ಣ ಮುಂದಿವೆ.

ಭಾರತ ಪ್ರಜಾಪ್ರಭುತ್ವ ದೇಶ. ಇಲ್ಲೊಂದು ಸಂವಿಧಾನ ಇದೆ. ಅದು ಈ ದೇಶದ ಪ್ರತಿ ಪ್ರಜೆಗೆ ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ. ತನಗೆ ಇಷ್ಟ ಬಂದ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯ, ಸಿದ್ಧಾಂತ, ಪಕ್ಷವನ್ನು ಬೆಂಬಲಿಸುವ, ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಹಕ್ಕನ್ನು ಕೊಟ್ಟಿದೆ. ಆ ಹಕ್ಕಿನ ಅಡಿಯಲ್ಲಿ ಈ ದೇಶದಲ್ಲಿ ದಿನವೂ ನೂರಾರು ಪ್ರತಿಭಟನೆಗಳು ನಡೆಯುತ್ತಿರುತ್ತವೆ. ಅದೇ ರೀತಿ ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನ ಹಕ್ಕುಗಳಿವೆ. ಬಿಜೆಪಿ ವಿಪಕ್ಷದಲ್ಲಿದ್ದಾಗ ಸರ್ಕಾರಗಳ ವಿರುದ್ಧ ಪ್ರತಿಭಟನೆ ಮಾಡಿಲ್ಲವೇ? ಆಗ ಮೋದಿ ಮತ್ತು ಅವರ ಬೆಂಬಲಿಗರನ್ನು ದೇಶದ್ರೋಹಿಗಳು ಎಂದು ಕರೆಯಲಾಗಿತ್ತೇ? ದೇಶದ್ರೋಹದ ಪ್ರಕರಣ ದಾಖಲಿಸಿ ಜೈಲಿಗಟ್ಟಲಾಗಿತ್ತೇ? ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಎರಡನೇ ಅವಧಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ರೂಪುಗೊಂಡಿರಲಿಲ್ಲವೇ? ಅದರ ಲಾಭವನ್ನು ಪಡೆದು ಅಧಿಕಾರಕ್ಕೆ ಬಂದ ಮೋದಿ ಮತ್ತವರ ಪರಿವಾರ ತಮ್ಮ ಸರ್ಕಾರದ ವಿರುದ್ಧ ಜನಾಂದೋಲವನ್ನು ಯಾಕೆ ಸಹಿಸುತ್ತಿಲ್ಲ?

ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂದು ಕರೆಸಿಕೊಳ್ಳುವ ಮಾಧ್ಯಮಗಳು ಕೂಡಾ ಉಮರ್ ಖಾಲಿದ್, ಅಭಿಜೀತ್ ದೀಪ್ಕೆ, ನೇಹಾ ಬೋರಾ ತರಹದ ಯುವ ನಾಯಕರನ್ನು ಮುಲಾಜಿಲ್ಲದೇ ದೇಶದ್ರೋಹಿ ಎಂದು ಕರೆಯುತ್ತಿವೆ. ಇತ್ತೀಚೆಗೆ ಮೋದಿ ಸರ್ಕಾರದ ನೀಟ್ ಪರೀಕ್ಷಾ ಅಕ್ರಮ, ವಿದ್ಯಾರ್ಥಿಗಳ ಆತ್ಮಹತ್ಯೆಯ ನಂತರ ದೆಹಲಿಯಲ್ಲಿ ನಡೆದ ಪ್ರತಿಭಟನೆ ಆಯೋಜಿಸಿದ್ದ ಸಿಜೆಪಿ ಮುಖಂಡರು, ಪ್ರತಿಭಟನೆಯಲ್ಲಿ ಸರ್ಕಾರದ ವಿರುದ್ಧ ಮಾತನಾಡಿದ ವಿದ್ಯಾರ್ಥಿ ಮುಖಂಡರ ಮೇಲೆ ಬಿಜೆಪಿ ಬೆಂಬಲಿಗರು ಹಲ್ಲೆ ಮಾಡಿದ್ದಾರೆ, ಮಸಿ ಎರಚಿದ್ದಾರೆ, ಅತ್ಯಾಚಾರ-ಕೊಲೆ ಬೆದರಿಕೆ ಒಡ್ಡಿದ್ದಾರೆ. ಮಾಧ್ಯಮಗಳು ಇಂತಹ ಕೃತ್ಯಗಳನ್ನು ಸಂಭ್ರಮಿಸಿವೆ. ರಿಪಬ್ಲಿಕ್ ಟಿವಿಯ ಸಂಪಾದಕ ಅರ್ನಬ್ ಗೋಸ್ವಾಮಿ ನಿರಂತರವಾಗಿ ''ಅಭಿಜೀತ್ ದೀಪ್ಕೆ ಮತ್ತು ಸಿಜೆಪಿ ವಕ್ತಾರರನ್ನು ದೇಶವಿರೋಧಿಗಳು, ವಿದೇಶಿ ಫಂಡ್ ಪಡೆದು ಮೋದಿ ಸರ್ಕಾರದ ವಿರುದ್ಧ ಪಿತೂರಿಯ ಭಾಗವಾಗಿ ಪ್ರತಿಭಟನೆ ನಡೆಸಿದ್ದಾರೆ'' ಎಂದು ಆರೋಪಿಸುತ್ತಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾದ ನೀತಿಗಳು, ಪರೀಕ್ಷಾ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಿದರೆ ಅದು ದೇಶದ್ರೋಹ ಎಂದಾದರೆ ಬಿಜೆಪಿಯೇತರ ಸರ್ಕಾರಗಳು ಇರುವ ರಾಜ್ಯಗಳಲ್ಲಿ ಬಿಜೆಪಿ ನಡೆಸುತ್ತಿರುವ ಪ್ರತಿಭಟನೆಗಳೂ ದೇಶದ್ರೋಹದ ಕೃತ್ಯದ ವ್ಯಾಪ್ತಿಗೆ ಬರುತ್ತದೆ ಅಲ್ಲವೇ?

ಇಡೀ ದೇಶ ಸ್ವಾತಂತ್ರ್ಯ ಹೋರಾಟದಲ್ಲಿ ಧರ್ಮ, ಜಾತಿ ಮರೆತು ಭಾಗಿಯಾಗಿದ್ದಾಗ ಒಂದು ಸಿದ್ಧಾಂತದ ಬೆಂಬಲಿಗರು ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಬದುಕನ್ನೇ ಅರ್ಪಿಸಿ, ಇಡೀ ದೇಶವನ್ನು ಒಗ್ಗೂಡಿಸಿದ್ದ ಗಾಂಧಿಯನ್ನು ಕೊಲ್ಲುವ ಸಂಚು ರೂಪಿಸಿ ಯಶಸ್ವಿಯಾಗಿದ್ದರು.. ಅಂಥ ಸಿದ್ಧಾಂತದ ಬೆಂಬಲಿಗರು ಅವರ ವಿರೋಧಿಗಳನ್ನೇ ದೇಶದ್ರೋಹಿಗಳು ಎಂದು ಕರೆಯುತ್ತಿರುವುದು ಹಾಸ್ಯಾಸ್ಪದ. ಭಗತ್ ಸಿಂಗ್, ಚಂದ್ರಶೇಖರ್ ಆಝಾದ್ ತರಹದ ನೂರಾರು ಬಿಸಿ ರಕ್ತದ ಯುವಕರು ಬ್ರಿಟಿಷರ ಗುಂಡಿಗೆ ಹೆದರಲಿಲ್ಲ. ಈಗ ನಮ್ಮದೇ ಸರ್ಕಾರ ಉಮರ್ ಖಾಲಿದ್ ತರಹದ ಈ ಕಾಲದ ಬಿಸಿ ರಕ್ತದ ದೇಶಪ್ರೇಮಿ ಯುವಕರನ್ನು ಜೈಲಿನಲ್ಲಿ ಕೊಳೆಯುವಂತೆ ಮಾಡುತ್ತಿದೆ. ಉಮರ್ ಖಾಲಿದ್ ಎತ್ತಿದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಪ್ರಜಾಪ್ರಭುತ್ವ ದೇಶದಲ್ಲಿ ಸರ್ಕಾರವೊಂದು ಮಾಡಬೇಕಿರುವ ಆದ್ಯ ಕರ್ತವ್ಯ. ಪ್ರಶ್ನೆ ಕೇಳಿದವರನ್ನು ದೇಶದ್ರೋಹಿಗಳು ಎಂದು ಹೀಗಳೆಯುವುದು ತರವಲ್ಲ.

ಹಬ್ಬ ಅಂದ್ರ ಕೂಡಿಸಬೇಕ್ರಿ, ರಾಜಕೀಯದ ವಿಷ ಬೀಜ ಬಿತ್ತೋದಲ್ಲ

ಹಬ್ಬಗಳು ಬಾಲ್ಯದ ಆ ಎತ್ತಿನ ಬಂಡಿಯ ನೆನಪಿನಂತೆ ಎಲ್ಲರನ್ನೂ ಮುಗ್ಧವಾಗಿ ಕೂಡಿಸಬೇಕೇ ಹೊರತು, ಮತ್ತೊಬ್ಬರ ಧರ್ಮವನ್ನು ಕೆಣಕಿ, ರಾಜಕೀಯ ಲಾಭಕ್ಕಾಗಿ ಬೀದಿಯಲ್ಲಿ ಬೆಂಕಿ ಹಚ್ಚುವ ಪ್ರವೃತ್ತಿ ಧರ್ಮವೂ ಅಲ್ಲ, ಭಾರತೀಯ ಸಂಸ್ಕೃತಿಯೂ ಅಲ್ಲ. ಸಂವಿಧಾನದ ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿದು, ಮನುಷ್ಯತ್ವದಿಂದ ಬಾಳುವುದೇ ಇವತ್ತಿನ ತುರ್ತು ಅಗತ್ಯ.

ಇತ್ತೀಚಿಗೆ ಟಿ. ನರಸೀಪುರದಾಗ ಒಬ್ಬ ಪೊಲೀಸ್ ಅಧಿಕಾರಿ ಬಹಳ ಸಣ್ಣ ಮಾತಿನಾಗ ದೊಡ್ಡ ಮರ್ಮ ಹೇಳ್ಯಾರ: ''ಹಬ್ಬ ಮಾಡ್ರಿ, ಆದ್ರ ಸರ್ಕಾರದ ನಿಯಮದ ಪ್ರಕಾರ ಮಾಡ್ರಿ; ನಿಮ್ಮ ಸಂಭ್ರಮ ಬೇರೆ ಧರ್ಮದವರಿಗೂ ಹಿತ ಅನಿಸಬೇಕು, ಅವರೂ ಗೌರವಿಸುವಂತಿರಬೇಕು'' ಅಂತ. ಎಂಥಾ ಚೊಕ್ಕ ಮಾತು ನೋಡ್ರಿ ಇದು! ಸಮಾಜದಾಗ ಶಾಂತಿ, ನೆಮ್ಮದಿ ಇರಬೇಕಂದ್ರ ಇಷ್ಟೇ ಸಾಕು. ಆದ್ರ ನಮ್ಮ ರಾಜಕಾರಣಿಗಳಿಗೆ ಇದು ಎಂದಿಗೂ ರುಚಿಸಂಗಿಲ್ಲ. ಯಾಕಂದ್ರ ಜನ ನೆಮ್ಮದಿಯಾಗಿದ್ರ ಅವರ ರಾಜಕೀಯದ ರೊಟ್ಟಿ ಹೆಂಗ ಬೇಯಬೇಕು? ಸಂವಿಧಾನದ ಮೇಲೆ ಪ್ರಮಾಣ ವಚನ ಸ್ವೀಕರಿಸಿ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರಂಥವರು, ''ನಾವು ಇಲ್ಲೇ ಹುಟ್ಟಿದೋರು, ನಾವ್ಯಾಕೆ ಪರ್ಮಿಷನ್ ತಗೋಬೇಕು? ನಾವು ಪಾಕಿಸ್ತಾನದಾಗಿದ್ದೀವೋ, ಹಿಂದೂಸ್ಥಾನದಾಗಿದ್ದೀವೋ? ಮಸೀದಿ ಮುಂದೆ ಪಟಾಕಿ ಹೊಡೆಯೋರು ನಾವೇ'' ಅಂತ ಗಂಟಲು ಹರಿದುಕೊಳ್ತಾರ. ಇನ್ನೊಬ್ಬ ಮಾಜಿ ಸಂಸದ ಪ್ರತಾಪ್ ಸಿಂಹ ''ಪೊಲೀಸ್ ಠಾಣೆಗೇ ನುಗ್ಗತೀನಿ'' ಅಂತ ಬೆದರಿಕೆ ಹಾಕ್ತಾರ. ಮಸೀದಿಗಳ ಮುಂದೆ ಉದ್ದೇಶಪೂರ್ವಕವಾಗಿ ಡಿಜೆ ಹಚ್ಚಿ ಪ್ರಚೋದನೆ ಮಾಡೋದು, ಪಟಾಕಿ ಸಿಡಿಸೋದು ಇವರ ಪ್ರಕಾರ ಧರ್ಮ ರಕ್ಷಣೆಯಂತೆ! ಇಡೀ ಬಿಜೆಪಿ ನಾಯಕರು ಅಲ್ಲಿಗೆ ದೌಡಾಯಿಸಿ ಕೋಮು ವಿಷ ಬೆರೆಸಲು ಹೊರಟಿದ್ದಾರೆ. ಕಾನೂನು, ಸುವ್ಯವಸ್ಥೆ ಅನ್ನೋದು ಕಾಗದದ ಮೇಲಷ್ಟೇ ಇರಬೇಕೇನ್ರಿ? ಸ್ವತಂತ್ರ ಭಾರತದಾಗ ಸಂವಿಧಾನಕ್ಕಿಂತ ದೊಡ್ಡವರು ಯಾರಾದ್ರೂ ಅದಾರೇನು?

ಆದ್ರೆ, ನಾವೆಲ್ಲ ಬಾಲ್ಯದಾಗ ಕಂಡ ಗಣೇಶ ಹಬ್ಬ ಹಿಂಗಿತ್ತೇನ್ರಿ?

ನನ್ನ ಬಾಲ್ಯದ ನೆನಪುಗಳನ್ನು ಕೆದಕಿದ್ರ, ಗಣೇಶೋತ್ಸವ ಅಂದ್ರೆ ಒಂದು ಮುಗ್ಧ ಸಂಭ್ರಮ, ಊರ ಮಂದಿಯ ಜೀವದ ಒಡನಾಟ. ನಮ್ಮ ಊರಾಗ ಮೊದಲ ಬಾರಿಗೆ ನೆಹರು ಯುವ ಕೇಂದ್ರದ ಅಧ್ಯಕ್ಷನಾಗಿದ್ದ ನಮ್ಮ ಕಾಕ ಭೀಮನಗೌಡ ರಾಯನಗೌಡ ಪಾಟೀಲ್ ಸಾರ್ವಜನಿಕ ಗಣೇಶೋತ್ಸವ ಶುರು ಮಾಡಿದ್ದ. ಆ ಕಾಲದಾಗ ಮೊಹರಂ ಹಬ್ಬಕ್ಕೂ ಅಕ್ಷಯ್ ಕುಮಾರ್‌ನ ತೂ ಚೀಜ್ ಬಡಿ ಹೈ ಮಸ್ತ್ ಮಸ್ತ್ ಹಾಡು ಮೊಳಗತಿತ್ತು, ಗಣೇಶನ ಮುಂದೂ ಅದೇ ಗುನುಗತಿತ್ತು. ಹಬ್ಬ ಯಾವುದಾದರೇನು, ಜನ ಜಾತಿ-ಧರ್ಮ ಮರೆತು ಒಟ್ಟಾಗಿ ಕುಣೀತಿದ್ರು!

ನಾನು ಐದನೇ-ಆರನೇ ತರಗತಿಯಲ್ಲಿದ್ದಾಗ ನಮ್ಮ ಸರ್ಕಾರಿ ಶಾಲೆಯಾಗ ಗಣೇಶೋತ್ಸವ ಮಾಡಿದ್ವಿ. ನಂಗ ಸ್ವಲ್ಪ ಮೈಕಟ್ಟು ದಪ್ಪ ಇತ್ತು, ಲೇಜಿಮ್ ಕುಣಿಯೋಕೆ ಬರಂಗಿಲ್ಲ ಅಂತ ಸಾತಿಹಾಳ ಸಾರು ನನಗ ಶಿವನ ವೇಷ ಹಾಕಿಸಿದ್ರು. ಮೈತುಂಬಾ ನೀಲಿ ಬಣ್ಣ ಬಳಿದು, ತಲೆಗೊಂದು ಕಿರೀಟ ತೊಡಿಸಿ, ನಮ್ಮವ್ವನ ಲಗ್ನದಾಗ ಅವಳು ಉಟ್ಟಕೊಂಡಿದ್ದ ರೇಷ್ಮೆ ಸೀರೆಯನ್ನೇ ಮಡಿಯಾಗಿ ನನಗ ದೋತರದಂಗ ಉಡಿಸಿದ್ರು. ನನ್ನ ಜೂನಿಯರ್ ರಾಚಯ್ಯನಿಗೆ ಪಾರ್ವತಿ ವೇಷ. ನಮ್ಮ ಅಪ್ಪು ಕಾಕ ಮತ್ತು ಒಕ್ಕಲುತನದ ರುದ್ರಪ್ಪಣ್ಣನ ಎತ್ತಿನ ಗಾಡಿ ಶೃಂಗರಿಸಿ, ಆ ಗಾಡಿ ಮೇಲೆ ನಾನೇ ಶಿವನಾಗಿ, ಪಕ್ಕದಲ್ಲಿ ಪಾರ್ವತಿಯಾದ ರಾಚಯ್ಯ ಕುಳಿತು, ನನ್ನ ತೊಡೆ ಮೇಲೆ ಗಣೇಶನ ಮೂರ್ತಿ ಹೊತ್ತು ಇಡೀ ಊರಾಗ ಮೆರವಣಿಗೆ ಹೋಗಿದ್ದು ಇವತ್ತಿಗೂ ಕಣ್ಣಿಗೆ ಕಟ್ಟಿದಂತೈತಿ.

ಅದಾದ ಮೇಲೆ ಕಲಬುರ್ಗಿಯ ಸಂತೋಷ್ ಕಾಲೋನಿಯಾಗ ನಮ್ಮ ಅಣ್ಣ ಶಿವಕುಮಾರ್ ಪಾಟೀಲ್ ಅಧ್ಯಕ್ಷನಾಗಿದ್ದಾಗ ನಡೆದ ಗಣೇಶೋತ್ಸವ. ವೇದಿಕೆ ಮೇಲೆ ನಮ್ಮ ತಮ್ಮ ಅವಿನಾಶ ಪ್ರಭುದೇವನ ಮುಕ್ಕಾಬಲಾ ಮುಕ್ಕಾಬಲಾ ಹಾಡಿಗೆ ಹೆಜ್ಜೆ ಹಾಕಿ ಜನರನ್ನು ಹುಚ್ಚೆದ್ದು ಕುಣಿಸಿದ್ದ. ಆಮೇಲೆ ಮಂಗಳೂರಿಗೆ ಹೋದಾಗ ಅಲ್ಲಿ ನಡೀತಿದ್ದ ಅನ್ನದಾಸೋಹದ ಗಣೇಶೋತ್ಸವ ನೋಡಿ ಖುಷಿಪಟ್ಟೆ.

ಮುಂದೆ 2002ರಿಂದ 2006ರವರೆಗೆ ನರ್ಸಿಂಗ್ ಓದುತ್ತಿದ್ದ ಕಾಲ. 2005-06ರಲ್ಲಿ ನಾನು ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೆ. ಆ ರಕ್ತದ ಬಿಸಿ, ಯೌವನದ ಹುಮ್ಮಸ್ಸಿನಾಗ ಎರಡನೇ ಗಣಪತಿ ಮೆರವಣಿಗೆಯನ್ನು ನಾವೇ ನಿಂತು ಮಾಡಿಸಿದ್ವಿ. ಅವತ್ತು ನಾವೂ ಪರ್ಮಿಷನ್ ತಗೊಂಡಿದ್ದಿಲ್ಲ, ಸೌಂಡ್ ಸಿಸ್ಟಮ್ ರಜಪೂತ್ ವಿಜಯ್ ಅವರ ಭರ್ಜರಿ ಸೌಂಡು, ನಾನೇ ಖರ್ಚು ವೆಚ್ಚ ನೋಡಿಕೊಂಡು, ಆರು ತಾಸು ಮೆರವಣಿಗೆ ನಡೆಸಿ, ಕಾಲೇಜು



ಚೇರ್ಮನ್ ಎಂ.ಬಿ. ಪಾಟೀಲರ ಕಾರನ್ನೇ ಅರ್ಧ ತಾಸು ನಿಲ್ಲಿಸಿ ಮೆರೆದಿದ್ದೆವು. ಬೆಳಗ್ಗೆ ತಂದು ರಾತ್ರಿಗೇ ವಿಸರ್ಜನೆ ಮಾಡೋ ಉತ್ಸಾಹ ಅದಾಗಿತ್ತು.

ಆದರೆ, ಕಾಲ ಕಳೆದಂತೆ ಕಣ್ಣು ತೆರೆಯಿತು. ವಿಶ್ವಗುರು ಬಸವಣ್ಣನವರ ಲಿಂಗಾಯತ ಧರ್ಮದ ತತ್ವ, ವಚನ ಸಾಹಿತ್ಯದ ವಿಚಾರಗಳು ನನ್ನೊಳಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದವು. ಇದು ನಿಜವಾದ ಸಾಮರಸ್ಯದ ಹಬ್ಬವಾಗಿ ಉಳಿದಿಲ್ಲ; ಬದಲಿಗೆ ಜನರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು, ತರ್ಕ-ಬುದ್ಧಿಗಳನ್ನು ಬದಿಗೊತ್ತಿ, ಸಮಾಜದಾಗ ಜಗಳ ತಂದಿಡುವ ಅಸ್ತ್ರವಾಗಿ ಬದಲಾಗ್ತಿದೆ ಅನ್ನೋ ಸತ್ಯ ಮನವರಿಕೆಯಾಯ್ತು. ನಾನೊಬ್ಬ ನಿರೀಶ್ವರವಾದಿಯಾಗಿ, ಬಸವ ಪರಂಪರೆಯ ಸಾಮಾಜಿಕ-ಸಾಂಸ್ಕೃತಿಕ ಆಂದೋಲನವನ್ನು ಒಪ್ಪಿಕೊಂಡವನಾಗಿ ಆ ಆಡಂಬರದಿಂದ ದೂರ ಸರಿದೆ. ಮುಂದೆ 2016-17ರಲ್ಲಿ ಪುಣೆಯಲ್ಲಿದ್ದಾಗ ಅಪಾರ್ಟ್‌ಮೆಂಟ್ ಸೊಸೈಟಿಯ ಕಾರ್ಯಕ್ರಮಕ್ಕೆ ಹೆಂಡತಿಯ ಭಕ್ತಿಗಾಗಿ, ಆಕೆಯ ಸಂತೋಷಕ್ಕಾಗಿ ಜೊತೆಯಾಗಿ ಹೋದೆನಷ್ಟೇ.

ಇನ್ನು ರಾಜಕೀಯ ಇತಿಹಾಸದ ಕಡೆ ನೋಡ್ರಿ.ಸಾರ್ವಜನಿಕ ಗಣೇಶೋತ್ಸವವನ್ನು ಬೀದಿಗೆ ತಂದ ಬಾಲಗಂಗಾಧರ ತಿಲಕರೂ ಕಾಂಗ್ರೆಸ್ಸಿಗರೇ ಆಗಿದ್ದರು. ಆದರೆ ತಿಲಕರ ರಾಜಕೀಯ-ಸಾಮಾಜಿಕ ಸಿದ್ಧಾಂತವನ್ನು ನಾನು ಎಂದಿಗೂ ಒಪ್ಪುವುದಿಲ್ಲ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ, ಅವರಲ್ಲಿದ್ದ ಸಾಮಾಜಿಕ ಸಂಪ್ರದಾಯವಾದ ತೀರಾ ಅಪಾಯಕಾರಿಯಾಗಿತ್ತು. ತಳಸಮುದಾಯದ ಕುಂಬಾರ, ಗಾಣಿಗ, ಹೂಗಾರರ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಸಿಗುವುದನ್ನು ಅವರು ಕಟುವಾಗಿ ವಿರೋಧಿಸಿದ್ದರು. ಇತಿಹಾಸದ ಸತ್ಯ ಇದು. ಅದೇ ಕಾಂಗ್ರೆಸ್ ಪರಂಪರೆಯಲ್ಲಿ ನೆಹರೂ ಇದ್ದರು, ಸುಭಾಷ್ ಚಂದ್ರ ಬೋಸ್ ಇದ್ದರು, ಭಗತ್ ಸಿಂಗ್ ಅವರಂತಹ ಕ್ರಾಂತಿಕಾರಿಗಳೂ ಆರಂಭದಲ್ಲಿ ಇದೇ ಸಂಘಟನಾ ವೇದಿಕೆಗಳಲ್ಲಿ ಗುರುತಿಸಿಕೊಂಡಿದ್ದರು. ಇವತ್ತು ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದವರು ಗಣೇಶೋತ್ಸವವನ್ನು ತಮ್ಮ ಸ್ವತ್ತಿನಂತೆ ಬಿಂಬಿಸುತ್ತಾ, ಕಾಂಗ್ರೆಸ್ ಅಂದರೆ ಕೇವಲ ಮುಸ್ಲಿಮರ ಪಕ್ಷ ಎಂಬಂತೆ ಸುಳ್ಳು ಕಥೆ ಕಟ್ಟಿ ಸಮಾಜವನ್ನು ಧ್ರುವೀಕರಿಸಲು ಹೊರಟಿದ್ದಾರೆ. ಮುಸ್ಲಿಮರು ಈದ್ ಮಿಲಾದ್ ಆಚರಿಸಿದರೆ ಇವರು ರಸ್ತೆಗೆ ಇಳಿದು ಬೆಂಕಿ ಹಚ್ಚಲು ನೋಡುತ್ತಾರೆ.

ಅಸಲಿಗೆ ಈ ಗಣಪತಿ ಯಾರು?

ಚಿಂತಕ ಡಾ. ವಡ್ಡಗೆರೆ ನಾಗರಾಜಯ್ಯನವರು ಜನಪದರಲ್ಲಿ ಪಿಳ್ಳೇರಾಯನ ಪರಿಕಲ್ಪನೆ ಮತ್ತು ವಚನಕಾರರು ನಿರಾಕರಿಸಿದ ಕಾಲ್ಪನಿಕ ಗಣಪತಿ ಎಂಬ ಲೇಖನದಲ್ಲಿ ಎತ್ತಿರುವ ಪ್ರಶ್ನೆಗಳನ್ನು ನಾವಿಂದು ಗಂಭೀರವಾಗಿ ಗಮನಿಸಬೇಕಾಗಿದೆ. ಈ ನೆಲದ ಕೃಷಿಯ ಶೋಧಕರಾದ ತಳಸಮುದಾಯಗಳ ನಂಬಿಕೆಯಲ್ಲಿ ಗಣಪತಿ ಅಂದರೆ ಪಿಳ್ಳೇರಾಯ ಅಥವಾ ಬೆನಕ. ಕುರಿ-ದನದ ಸಗಣಿ ಉಂಡೆಯ ಮೇಲೆ ಗರಿಕೆಯನ್ನಿಟ್ಟು, ಫಲ ನೀಡುವ ಭೂಮಿಗೆ ಮತ್ತು ಬೆಳೆಯ ಹುಲುಸಿಗೆ ಕೈಮುಗಿಯುತ್ತಿದ್ದ ಶ್ರಮಿಕ ಸಂಸ್ಕೃತಿ ಅದು. ಹೆಣ್ಣೊಬ್ಬಳು ಗಂಡನಲ್ಲದ ಗಂಡನಿಂದ ಮಕ್ಕಳನ್ನು ಪಡೆಯಲು ಸ್ವತಂತ್ರಳಾಗಿದ್ದ ತಾಯ್ಮೂಲದ ಕಲ್ಪನೆಯಲ್ಲಿ ಪಾರ್ವತಿಯ ಮೈಕೊಳೆಯಿಂದ ಹುಟ್ಟಿದವನು ಈತ. ಸಗಣಿ ಕೃಷಿಯ ತಿಪ್ಪೆಗೆ ಸೇರಿ ಬೆಳೆ ನೀಡುವ ತಿಪ್ಪಯ್ಯ, ತಿಪ್ಪೇಶ, ತಿಪ್ಪೇಸ್ವಾಮಿ ಆಗುವ ಜೀವಪರ ದಾರಿ ಅದು. ದೇವಿಪ್ರಸಾದ ಚಟ್ಟೋಪಾಧ್ಯಾಯ ಮತ್ತು ಡಿ.ಡಿ. ಕೋಸಾಂಬಿಯವರ ಅಧ್ಯಯನಗಳ ಪ್ರಕಾರ, ಗಣಪತಿಯು ಮೂಲತಃ ಮಾತಂಗ (ಆನೆ) ವಂಶದವರ ಗಣನಾಥ. ಆದರೆ ವೈದಿಕಶಾಹಿಯು ಈ ಮೂಲ ನೆಲೆಯನ್ನೇ ಕಸಿದುಕೊಂಡು, ಆನೆಯನ್ನು ಕಡಿದು ಕಾಲ್ಪನಿಕ ಗಣಪತಿಯನ್ನಾಗಿಸಿ ತನ್ನ ಅನುಕೂಲಕ್ಕೆ ಹೈಜಾಕ್ ಮಾಡಿಕೊಂಡಿತು.

ಹನ್ನೆರಡನೇ ಶತಮಾನದ ಶರಣರು ಇಂಥ ಕಾಲ್ಪನಿಕ ಮೂಢನಂಬಿಕೆಗಳನ್ನು ಅತ್ಯಂತ ಕ್ರಾಂತಿಕಾರಕವಾಗಿ ನಿರಾಕರಿಸಿದರು.

ಬಸವಣ್ಣನವರು ನೇರವಾಗಿಯೇ ಎಚ್ಚರಿಸಿದರು:

''ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದಡೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ,
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ.
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ ?''

ಇನ್ನು ಚೆನ್ನಬಸವಣ್ಣನವರಂತೂ ವೈದಿಕರು ಸೃಷ್ಟಿಸಿದ ಇಲಿ ವಾಹನದ ಕಲ್ಪನೆಯನ್ನೇ ವಿಡಂಬಿಸುತ್ತಾ:

''ಬೇಡವೋ ಇಲಿಚಯ್ಯಾ !
ಮೊನ್ನೆ ಬಂದು ನಮ್ಮ ಶಿವದಾರವ ಕಡಿದೆ,
ಇಂದು ಬಂದು ನಮ್ಮ ವಸ್ತ್ರವ ಕಡಿದೆ.
ಬೇಡವೋ ಇಲಿಚಯ್ಯಾ !
ನಿನಗಂಜರು ನಿನ್ನ ಗಣಪತಿಗಂಜರು;
ಕೂಡಲಚೆನ್ನಸಂಗನ ಶರಣರು ಕಂಡಡೆ, ನಿನ್ನ ಹಲ್ಲ ಕಳೆವರು,
ಹಂತವ ಮುರಿವರು'' ಎಂದು ಧಿಕ್ಕರಿಸಿದರು.

ದೇಹವನ್ನೇ ದೇವಾಲಯವಾಗಿಸಿ, ಅರಿವಿನ ಕುರುಹಾಗಿ ಇಷ್ಟಲಿಂಗವನ್ನು ಕರಸ್ಥಲಕ್ಕೆ ತಂದುಕೊಟ್ಟ ಶರಣರು ಯಾವುದೇ ಕಾಲ್ಪನಿಕ ದೈವಗಳಿಗೆ ತಲೆಬಾಗಲಿಲ್ಲ. ಆದರೆ ಇವತ್ತು ಏನಾಗುತ್ತಿದೆ? ವೈದಿಕರು ಹೇರಿದ ಅದೇ ಕಾಲ್ಪನಿಕ ಗಣಪತಿಯನ್ನು ತಳಸಮುದಾಯದ ಯುವಕರು ನೆತ್ತಿಯ ಮೇಲೆ ಹೊತ್ತುಕೊಂಡು ಮೆರೆಯುತ್ತಿದ್ದಾರೆ; ಆ ಮೂಲಕ ಜಾತ್ಯತೀತ, ಸಮಾಜವಾದಿ, ಪ್ರಜಾಸತ್ತಾತ್ಮಕ ಗಣತಂತ್ರ ಭಾರತದ ಸುಂದರ ಕಸೂತಿಯ ಸೌಹಾರ್ದತೆಯ ವಸ್ತ್ರವನ್ನೇ ಹರಿದು ಚಿಂದಿ ಮಾಡುತ್ತಿದ್ದಾರೆ!

ಜಗತ್ತಿನ ಧರ್ಮಗಳನ್ನು ನೋಡಿರಿ.ಮುಸಲ್ಮಾನರಿಗೆ ಕುರಾನ್ ಐತಿ, ಕ್ರಿಶ್ಚಿಯನ್ನರಿಗೆ ಬೈಬಲ್ ಐತಿ, ಸಿಖ್ಖರಿಗೆ ಗುರು ಗ್ರಂಥ ಸಾಹಿಬ್ ಐತಿ, ಬೌದ್ಧರಿಗೆ ತ್ರಿಪಿಟಕಗಳದಾವ. ಆದರೆ ಇಲ್ಲಿ 138 ಕೋಟಿ ದೇವರುಗಳನ್ನು ಸೃಷ್ಟಿಸಿ, ದಿನಕ್ಕೊಂದು ಹಬ್ಬ ತಂದು, ಧರ್ಮದ ಹೆಸರಿನಲ್ಲಿ ಜನರನ್ನು ದಿಕ್ಕುತಪ್ಪಿಸಲಾಗುತ್ತಿದೆ. ನಮ್ಮ ನೆಲಮೂಲದ ಬಸವ ತತ್ವದ ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯವೇ ಪರಮ ಧರ್ಮಗ್ರಂಥ. ''ದಯವಿಲ್ಲದ ಧರ್ಮವದೇವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ'' ಎಂದ ಕಲ್ಯಾಣದ ನಾಡು ನಮ್ಮದು.

ಹಬ್ಬಗಳು ಬಾಲ್ಯದ ಆ ಎತ್ತಿನ ಬಂಡಿಯ ನೆನಪಿನಂತೆ ಎಲ್ಲರನ್ನೂ ಮುಗ್ಧವಾಗಿ ಕೂಡಿಸಬೇಕೇ ಹೊರತು, ಮತ್ತೊಬ್ಬರ ಧರ್ಮವನ್ನು ಕೆಣಕಿ, ರಾಜಕೀಯ ಲಾಭಕ್ಕಾಗಿ ಬೀದಿಯಲ್ಲಿ ಬೆಂಕಿ ಹಚ್ಚುವ ಪ್ರವೃತ್ತಿ ಧರ್ಮವೂ ಅಲ್ಲ, ಭಾರತೀಯ ಸಂಸ್ಕೃತಿಯೂ ಅಲ್ಲ. ಸಂವಿಧಾನದ ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿದು, ಮನುಷ್ಯತ್ವದಿಂದ ಬಾಳುವುದೇ ಇವತ್ತಿನ ತುರ್ತು ಅಗತ್ಯ.

ಸೂಕ್ತ ಸಮಯಕ್ಕಾಗಿ ಕಾಯುತ್ತಿರುವ ಕುಮಾರಸ್ವಾಮಿ!

''ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯವಹಾರದ ಬಗ್ಗೆ ಜನರ ಮುಂದೆ ಇಡುವುದರಲ್ಲಿ ಯಾವುದೇ ರಾಜಿಯಿಲ್ಲ. ರಾಜ್ಯದಲ್ಲಿನ ಘಟನೆ ಬಗ್ಗೆ ಬಾಯಿ ಮುಚ್ಚಿಕೊಂಡಿರಲು ಆಗಲ್ಲ'' ಎಂದಿದ್ದಾರೆ ಕುಮಾರಸ್ವಾಮಿ. ಈ ಬಾರಿಯಾದರೂ ಅಲ್ಲೋಲ ಕಲ್ಲೋಲ ಸೃಷ್ಟಿಸುತ್ತಾರೆಯೇ?

ಸ್ಫೋಟಕ ಹೇಳಿಕೆ, ಹೊಸ ಬಾಂಬ್- ಇತ್ಯಾದಿ ಪದಪುಂಜಗಳನ್ನು ಮಾಧ್ಯಮಗಳು ಕೆಲವೇ ಕೆಲವು ರಾಜಕಾರಣಿಗಳಿಗಾಗಿ ಎಚ್ಚೆತ್ತವಾಗಿ ಬಳಸುವಂತೆ ಕಾಣುತ್ತವೆ. ಬಹುಶಃ ಮೀಡಿಯಾಗಳ ಈ ಪಟ್ಟಿಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರು ಮೊದಲಿಗರಾಗಿದ್ದರೆ ಅಚ್ಚರಿ ಪಡಬೇಕಿಲ್ಲ. ಎಚ್‌ಡಿಕೆ ಹೊಸ ಬಾಂಬ್ ಎಂದು ವರದಿಯಾಗುವುದು, ಆಮೇಲೆ ಅದು ಬಾಂಬ್ ಆಗಿರದೆ, ಠುಸ್ ಪಟಾಕಿ ಆಗಿತ್ತು ಎಂದು ಗೇಲಿಗೆ ಒಳಗಾಗುವುದು ರಾಜಕಾರಣದಲ್ಲಿ ಸಾಮಾನ್ಯವಾಗಿಬಿಟ್ಟಿದೆ.

ರಾಜಕೀಯವಾಗಿ ಅಲ್ಲೋಲ ಕಲ್ಲೋಲ ಸೃಷ್ಟಿಸುವ ಹೇಳಿಕೆಗಳನ್ನು ರಾಜಕಾರಣಿಗಳು ನೀಡಿದಾಗ ಸಾಮಾನ್ಯವಾಗಿ ಸ್ಫೋಟಕ, ಹೊಸ ಬಾಂಬ್- ಇತ್ಯಾದಿ ಪದಗಳನ್ನು ಬಳಸುವುದು ರೂಢಿಯಲ್ಲಿದೆ. ಆದರೆ ಕುಮಾರಸ್ವಾಮಿಯವರ ಹೇಳಿಕೆಗಳಿಗೆ ಈ ಸ್ಫೋಟಕ, ಹೊಸ ಬಾಂಬ್ ಇತ್ಯಾದಿ ವಿಶೇಷಣಗಳನ್ನು ಸೇರಿದಾಗ- ಅವು ಗಂಭೀರವಾಗಿ ಕಂಡಿದ್ದಕ್ಕಿಂತ, ಅಪಹಾಸ್ಯದ ಸರಕಾಗಿ ಹೊಮ್ಮಿದ್ದೇ ಹೆಚ್ಚು. ಕೆಲವೊಮ್ಮೆ ನಿಜದ ಅರ್ಥದಲ್ಲಿ ಸ್ಫೋಟಕ ಎನಿಸುವ ಹೇಳಿಕೆಗಳನ್ನೂ ಕೊಟ್ಟರೂ, ತಾರ್ತಿಕ ಅಂತ್ಯಕ್ಕೆ ಕೊಂಡೊಯ್ಯದೆ ನಿಂತುಬಿಡುವುದು ಕುಮಾರಸ್ವಾಮಿಯವರ ಸೋಲು. ಹೀಗಾಗಿಯೇ ಎಚ್‌ಡಿಕೆಯವರ ಆರೋಪಗಳ ಜೊತೆಗೆ ಹಿಟ್ ಅಂಡ್ ರನ್ ಅಪವಾದವೂ ಅಂಟಿಕೊಂಡುಬಿಟ್ಟಿದೆ.

''ಅಕ್ಕ ಸಮ್ಮೇಳನದ ಹಿನ್ನೆಲೆಯಲ್ಲಿ ಅಮೆರಿಕಗೆ ತೆರಳುತ್ತಿದ್ದು, ಅಲ್ಲಿಂದ ಬಂದ ಬಳಿಕ ದೇಶವೇ ಅಲ್ಲೋಲ ಕಲ್ಲೋಲ ಆಗುವ ವಿಷಯ ಹೇಳುತ್ತೇನೆ. ಪ್ರಾಮಾಣಿಕವಾಗಿ ಜನರ ಮುಂದೆ ಹಲವು ದಾಖಲೆ ಇಡ್ತೇನೆ. ನಿಮಗೆ ದಿನಕ್ಕೊಂದು ಸುದ್ದಿ ಕೊಡುತ್ತೇನೆ. ಆಗ ಹೆಚ್.ಡಿ.ಕುಮಾರಸ್ವಾಮಿ ಏನು ಎಂದು ಗೊತ್ತಾಗುತ್ತೆ'' ಎಂದಿದ್ದರು ಕುಮಾರಸ್ವಾಮಿ.

ಕುಮಾರಸ್ವಾಮಿಯವರು ವಾಪಸ್ ಬರುವ ವೇಳೆಗೆ ಅಪರಾಧಿ ಪ್ರಜ್ವಲ್ ರೇವಣ್ಣನಿಗೆ ಸಂಬಂಧಿಸಿದ ಸುದ್ದಿಗಳು ಮಾಧ್ಯಮಗಳಲ್ಲಿ ಸದ್ದು ಮಾಡಿದ್ದವು. ಪ್ರಜ್ವಲ್ ಜೈಲಿನಲ್ಲೂ ಅಶ್ಲೀಲ ವಿಡಿಯೊಗಳನ್ನು ವೀಕ್ಷಿಸುವ ವ್ಯವಸ್ಥೆ ಮಾಡಿಕೊಂಡಿದ್ದ ಮತ್ತು ಆತನ ಬಳಿ ಪತ್ತೆಯಾಗಿದ್ದ ಪೆನ್ ಡ್ರೈವ್ ನಲ್ಲಿ 170ಕ್ಕೂ ಹೆಚ್ಚು ಅಶ್ಲೀಲ ದೃಶ್ಯಗಳು ಸಿಕ್ಕಿವೆ ಎಂಬ ಸುದ್ದಿ ವರದಿ ಹೊರಬಿತ್ತು. ''ಕುಮಾರಸ್ವಾಮಿಯವರು ಹೇಳುತ್ತಿದ್ದ ಸ್ಫೋಟಕ ಸುದ್ದಿ ಇದುವೆ?'' ಎಂದು ನೆಟ್ಟಿಗರು ವ್ಯಂಗ್ಯವಾಡಿದರು.

ಅಮೆರಿಕದಿಂದ ಹಿಂದಿರುಗಿದ ಅವರು, ಹಾಸನಕ್ಕೆ ಆಗಮಿಸಿ ತಾಯಿ ಚೆನ್ನಮ್ಮ ಅವರ ಸಮಾಧಿಗೆ ಭೇಟಿ ಕೊಟ್ಟರು. ಅಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಾ, ''ನನ್ನ ಹೇಳಿಕೆ ಬಗ್ಗೆ ಎಲ್ಲರೂ ತಲೆಕೆಡಿಸಿಕೊಂಡಿದ್ದಾರೆ, ಯಾವಾಗ ಬರ್ತಾನೆ? ನನ್ನದು ಏನಿರಬಹುದು ಎಂದು ರಾತ್ರಿ ನಿದ್ರೆಯಲ್ಲೂ ಕೂಡ ಕನವರಿಸಿದ್ದಾರೆ. ನಾನು ಮಾಧ್ಯಮ ಸ್ನೇಹಿತರಿಗೆ ನಿರಾಸೆ ಮಾಡೋದಿಲ್ಲ. ನಿಮಗೆ ಒಳ್ಳೆಯ ರೀತಿ ಆಹಾರವನ್ನ ಕೊಡುತ್ತೇನೆ. ವಿಜಯದಶಮಿ, ಅದು ಯುದ್ಧಕ್ಕೆ ಒಳ್ಳೆ ಕಾಲ, ಆದ್ದರಿಂದ ಪ್ರಾರಂಭ ಮಾಡುತ್ತೇನೆ'' ಎಂದಿದ್ದಾರೆ. ಜೊತೆಗೆ ಪ್ರಜ್ವಲ್‌ಗೆ ಸಂಬಂಧಿಸಿದ ಸುದ್ದಿಯನ್ನು ವಿಷಯಾಂತರದ ಸರಕಾಗಿ ಬಳಸುತ್ತಿದ್ದಾರೆ ಎಂಬ ಪ್ರತಿಪಾದನೆಯನ್ನೂ ಮಾಡಿದ್ದಾರೆ. ''ಬಿಡದಿ, ನೈಸ್, ವಿಚಾರದ ಬಗ್ಗೆ ಮಾತನಾಡಿದ ಕೂಡಲೇ, ಪರಪ್ಪನ ಅಗ್ರಹಾರ, ಪೆನ್‌ಡ್ರೈವ್ ವಿಚಾರ ಮುನ್ನಲೆಗೆ ಬಂದಿದೆ. ಎರಡು ವರ್ಷದಿಂದ ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಇದ್ದಾನೆ, ಇಷ್ಟು ದಿನ ಇಲ್ಲದೇ ಇದ್ದದ್ದು ಈಗ ಯಾಕೆ ಮುನ್ನಲೆಗೆ ಬರುತ್ತಿದೆ. ಪ್ರಜ್ವಲ್ ಕೈಯಲ್ಲಿ ಫೋನ್ ಇದೆ, ಅದರಲ್ಲಿ ಅಶ್ಲೀಲ ದೃಶ್ಯ ಇದೆ ಎನ್ನುವುದನ್ನು ತಿಳಿದುಕೊಳ್ಳಲು ಎರಡು ವರ್ಷ ಬೇಕಾಯಿತಾ, ಈ ಡ್ರಾಮಾ ನಡೆಸುತ್ತಿರುವವರು ಯಾರು?'' ಎಂದು ಪ್ರಶ್ನಿಸಿದ್ದಾರೆ.

''ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯವಹಾರದ ಬಗ್ಗೆ ಜನರ ಮುಂದೆ ಇಡುವುದರಲ್ಲಿ ಯಾವುದೇ ರಾಜಿಯಿಲ್ಲ. ರಾಜ್ಯದಲ್ಲಿನ ಘಟನೆ ಬಗ್ಗೆ ಬಾಯಿ ಮುಚ್ಚಿಕೊಂಡಿರಲು ಆಗಲ್ಲ. ಈಗಿರುವ ಸರ್ಕಾರದ ಮಂತ್ರಿಗಳ ಅಡಿಯೇ ಕೆಪಿಎಸ್‌ಸಿ, ಎಇಇ ಹಗರಣಗಳು ನಡೆದಿವೆ. ಲಕ್ಷಾಂತರ ಯುವಕರ ಭಾವನೆಗಳನ್ನು ಮಾರಾಟಕ್ಕಿಟ್ಟು ವಸೂಲಿ ಮಾಡಲಾಗಿದೆ. ಇದ್ಯಾವುದನ್ನೂ ನಾನು ಹೇಳುತ್ತಿಲ್ಲ. ದಾಖಲೆಗಳು ಹೇಳುತ್ತಿವೆ. ಅಕ್ರಮಗಳನ್ನ ಜನರ ಮುಂದಿಡುವುದು ನನ್ನ ಜವಾಬ್ದಾರಿ. ತೀರ್ಮಾನ ಜನರದ್ದು. ನಾನು ಯಾವುದೇ ದಾಖಲೆ ಇಲ್ಲದೇ ಯಾರ ಬಗ್ಗೆಯೂ ಮಾತನಾಡಲು ಹೋಗುವುದಿಲ್ಲ, ಅಮೆರಿಕಗೆ ಹೋಗುವ ಮುನ್ನ ಏನು ಹೇಳಿಕೆ ನೀಡಿದ್ದೆ, ಅದಕ್ಕೆ ಬದ್ಧನಾಗಿದ್ದೇನೆ'' ಎಂದಿದ್ದಾರೆ. ಆದರೆ, ವಿಜಯದಶಮಿಯವರೆಗೆ ಕಾಲವನ್ನು ಮುಂದೂಡಿದ್ದು, ನಿಜಕ್ಕೂ ಅಲ್ಲೋಲ ಕಲ್ಲೋಲ ಸೃಷ್ಟಿಸುವ ಸುದ್ದಿ ಕೊಡುತ್ತಾರೋ ಅಥವಾ ನಿರಾಸೆ ಮಾಡುತ್ತಾರೋ ಗೊತ್ತಿಲ್ಲ.

''ಸ್ಫೋಟಕ ಸುದ್ದಿ ರಿವೀಲ್ ಮಾಡುತ್ತೇನೆ'' ಎಂದು ಹೇಳಿಕೆ ನೀಡುವುದು ಕುಮಾರಸ್ವಾಮಿಯವರ ಸ್ಟೈಲ್ ಆಫ್ ಪೊಲಿಟಿಕ್ಸ್. 2023ರ ಜುಲೈ ತಿಂಗಳಿನಲ್ಲಿ ಅಕ್ರಮ ವರ್ಗಾವಣೆ ದಂಧೆಯ ಆರೋಪ ಮಾಡಿದ್ದರು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ''ದಾಖಲೆ ಇದ್ದರೆ ತೋರಿಸಿ'' ಎಂದು ಸವಾಲು ಹಾಕಿದ್ದರು. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಎಚ್‌ಡಿಕೆಯವರು ತಮ್ಮ ಜೇಬಿನಲ್ಲಿದ್ದ ಪೆನ್ ಡ್ರೈವ್ ಒಂದನ್ನು ತೆಗೆದು, ''ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ವರ್ಗಾವಣೆ ದಂಧೆಗೆ ಸಂಬಂಧಿಸಿದಂತೆ ನನ್ನ ಬಳಿ ಸಾಕ್ಷಿಯಿದೆ. ಕಾಂಗ್ರೆಸ್ ವರ್ಗಾವಣೆಗೆ ಸಂಬಂಧಿಸಿದ ಆಡಿಯೋ ಇದೆ'' ಎಂದು ಹೇಳಿದ್ದರು.

ಇದಾದ ವಾರದ ಬಳಿಕ, ''ಪೆನ್ ಡ್ರೈವ್ ವಿವರಗಳನ್ನು ಬಿಡುಗಡೆ ಮಾಡಲು ನನ್ನ ಕಡೆಯಿಂದ ಯಾವುದೇ ತುರ್ತು ಇಲ್ಲ. ಕಾಂಗ್ರೆಸ್ ನಾಯಕರೇ ಅದನ್ನು ಬಿಡುಗಡೆ ಮಾಡದಂತೆ ತಡೆಯುತ್ತಿದ್ದಾರೆ. ಚಿಂತಿಸಬೇಡಿ, ನಾನು ಇನ್ನೂ ಅನೇಕ ವಿಷಯಗಳನ್ನು ಪಡೆದುಕೊಳ್ಳಲಿದ್ದೇನೆ. ಕಾಂಗ್ರೆಸ್ ನಾಯಕರ ಒಂದು ವರ್ಗವು ತಮ್ಮ ಪಕ್ಷದಿಂದ ಹೊರಬರಲು ಒಂದು ವಿಕೆಟ್ ಬೀಳುವುದಕ್ಕಾಗಿ ಕಾಯುತ್ತಿದೆ'' ಎಂದಿದ್ದರು. ಆದರೆ ಇದಾಗಿ, ಮೂರು ವರ್ಷಗಳೇ ಕಳೆದಿವೆ. ಪೆನ್ ಡ್ರೈವ್ ಮಾತ್ರ ಹೊರಗೆ ಬೀಳಲಿಲ್ಲ. ಈ ಘಟನಾವಳಿಗಳು ನಡೆಯುತ್ತಿದ್ದಾಗ, ಲೋಕಸಭಾ ಚುನಾವಣೆಯ ಹೊತ್ತಿಗೆ ಪ್ರಜ್ವಲ್ ರೇವಣ್ಣನಿಗೆ ಸಂಬಂಧಿಸಿದ ಪೆನ್‌ಡ್ರೈವ್‌ಗಳು ಹಾಸನದ ಗಲ್ಲಿಗಲ್ಲಿಗಳಲ್ಲಿ ಪತ್ತೆಯಾಗಿ, ರಾಜಕೀಯ ತಿರುವುಗಳಿಗೆ ಕಾರಣವಾದವು. ಪ್ರಜ್ವಲ್ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣ ಸಾಬೀತಾಗಿ, ಈಗ ಜೈಲು ಶಿಕ್ಷೆಯನ್ನೂ ಅನುಭವಿಸುತ್ತಿದ್ದಾನೆ. ಕುಮಾರಸ್ವಾಮಿಯವರ ರಾಜಕೀಯ ವಿರೋಧಿಗಳು ಆ ಸಂದರ್ಭದಲ್ಲಿ, ಕುಮಾರಣ್ಣನವರ ಪೆನ್ ಡ್ರೈವ್ ಅನ್ನು ಪ್ರಜ್ವಲ್ ಪ್ರಕರಣಕ್ಕೆ ಥಳುಕು ಹಾಕಿ ವ್ಯಂಗ್ಯವಾಡಿದ್ದರು.

2025ರ ನವೆಂಬರ್‌ನಲ್ಲಿ ನಡೆದ ಜೆಡಿಎಸ್ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ್ದ ಕುಮಾರಸ್ವಾಮಿಯವರು, ''ಕೆಲವೇ ತಿಂಗಳುಗಳಲ್ಲಿ ರಾಜ್ಯ ರಾಜಕಾರಣವು ಸ್ಫೋಟಕ ಬೆಳವಣಿಗೆಗೆ ಸಾಕ್ಷಿಯಾಗಲಿದೆ. ಆ ರಾಜಕೀಯ ಬೆಳವಣಿಗೆಗೆ ಜೆಡಿಎಸ್ ಕಾರ್ಯಕರ್ತರು ಸಿದ್ಧರಾಗಿರಬೇಕು. ರಾಜ್ಯದಲ್ಲಿ ಯಾರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಲಾಗದ ಪರಿಸ್ಥಿತಿ ಸೃಷ್ಟಿಯಾಗಿದೆ. ಕೆಲವೇ ತಿಂಗಳಲ್ಲಿ ರಾಜಕೀಯ ಕ್ರಾಂತಿ ಆಗುವ ಸಾಧ್ಯತೆ ಇದೆ. ಹೀಗಾಗಿ ಕಾರ್ಯಕರ್ತರು ಮತ್ತು ಮುಖಂಡರು ಜನರ ಬಳಿಯೇ ಇರಬೇಕು. ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧರಿರಬೇಕು'' ಎಂದಿದ್ದರು. ಆದರೆ ಅಲ್ಲೋಲ ಕಲ್ಲೋಲ ಸೃಷ್ಟಿಯಾಗುವ ಬೆಳವಣಿಗೆಗಳು ನಡೆಯಲಿಲ್ಲ. ಕಾಂಗ್ರೆಸ್ ನಾಯಕರ ನಡುವೆ ಆಂತರಿಕವಾಗಿ ಆಗಿದೆ ಎನ್ನಲಾದ ಒಡಂಬಡಿಕೆಯ ಆಧಾರದಲ್ಲಿ ಸಿದ್ದರಾಮಯ್ಯನವರು ಸಿಎಂ ಕುರ್ಚಿಯಿಂದ ಇಳಿದರು. ಘನತೆಯಿಂದ ನಿರ್ಗಮಿಸಿದರು. ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರು. ಪಕ್ಷದೊಳಗೂ ಹೆಚ್ಚಿನ ಕಗ್ಗಂಟು ಉಂಟಾಗಲಿಲ್ಲ. ಶಿಸ್ತುಬದ್ಧವಾಗಿ ನಾಯಕತ್ವ ಬದಲಾವಣೆಯನ್ನು ಕಾಂಗ್ರೆಸ್ ಮಾಡಿತ್ತು. ಕುಮಾರಸ್ವಾಮಿಯವರು ಹೇಳಿದ್ದು ನೋಡಿದರೆ, ''ದೊಡ್ಡ ಮಟ್ಟದ ಆಪರೇಷನ್ ಕಮಲ ನಡೆಯುತ್ತದೆಯೋ, ಕಾಂಗ್ರೆಸ್ ಛಿದ್ರವಾಗಿ ವಿಧಾನಸಭೆ ವಿಸರ್ಜನೆಯಾಗುತ್ತದೆಯೋ ಅಥವಾ ಸಿದ್ದರಾಮಯ್ಯನವರು ಸಿಡಿದೆದ್ದು ನಿಲ್ಲುತ್ತಾರೆಯೋ'' ಎನ್ನುವ ಮಟ್ಟಿಗೆ ಇತ್ತು. ಆದರೆ ಯಾವುದೂ ಸಂಭವಿಸಲಿಲ್ಲ!

ಒಕ್ಕಲಿಗ ನಾಯಕತ್ವಕ್ಕಾಗಿ ಡಿ.ಕೆ. ಶಿವಕುಮಾರ್ ಮತ್ತು ಎಚ್. ಡಿ. ಕುಮಾರಸ್ವಾಮಿಯವರ ನಡುವೆ ನಡೆಯುವ ರಾಜಕೀಯ ಕಾಳಗ, ವಾಕ್ಸಮರಕ್ಕೆ ದೊಡ್ಡ ಇತಿಹಾಸವೇ ಇದೆ. ರಾಜಕೀಯವಾಗಿ ಒಬ್ಬರನ್ನೊಬ್ಬರು ಮೆಟ್ಟಿ ನಿಲ್ಲಬೇಕಾದ ಸನ್ನಿವೇಶದಲ್ಲಿ ಕುಮಾರಸ್ವಾಮಿಯವರು ಆರೋಪಗಳನ್ನು ಮಾಡುವುದು, ಡಿಕೆ ಶಿಕುಮಾರ್ ಅವರು, ''ಇವೆಲ್ಲ ಹಿಟ್ ಅಂಡ್ ರನ್'' ಎನ್ನುವುದು ಸಾಮಾನ್ಯ. ಆದರೆ ಈ ಬಾರಿಯಾದರೂ ಕುಮಾರಸ್ವಾಮಿಯವರು ದಾಖಲೆಗಳನ್ನು ಬಿಡುಗಡೆ ಮಾಡುತ್ತಾರೆಯೇ? ವಿಜಯದಶಮಿಯ ಬಳಿಕ ಮಾಧ್ಯಮಗಳಿಗೆ ನಿರಾಶೆ ಉಂಟು ಮಾಡುವುದಿಲ್ಲವೇ?- ಅದು ಕುಮಾರಸ್ವಾಮಿಯವರಿಗೆ ಮಾತ್ರ ಗೊತ್ತು!

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR